ಜನಪದ ವಿಚಾರ

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೫ ಜೂನ್-೨೦೦೫ ಸಂಚಿಕೆ-೧೧



ಪ್ರಜಾತಂತ್ರದಲ್ಲಿ ಪ್ರತಿಪಕ್ಷಗಳ ತಂತ್ರ ಫಲಕಾರಿಯಾಗಿದೆಯೆ?

ರಾಜಕಾರಣವೊಂದೆ ಸಾಲದು

ರವೀಂದ್ರರೊಡನೆ ೨೨ ವರ್ಷ

ಪು.ತಿ.ನ. ನೋಡಿದ ಮೇಲುಕೋಟೆ

ಜನಪದ ವಿಚಾರದಲ್ಲಿ

ಮೇ-೨೦೦೫.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜೂನ್-೨೦೦೫

ಸಂಪುಟ-೫

ಸಂಚಿಕೆ-೧೧

ಸಂಪಾದಕ

ಸುರೇಂದ್ರ ಕೌಲಗಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-೫೭೧ ४३१

ಮಂಡ್ಯ ಜಿಲ್ಲೆ

✆(08236)298754

e-mail-janapada@yahoo.com

www.janapada.org

ಪಾರ್ಥಿವ ವರುಷ ಪುರುಷಾ

ಪಾರ್ಥಿವ ವರುಷ ಪುರುಷಾ
ವರುಷ ಅರವತ್ತರ ಹಿಂದೆ ನೀ ಬಂದಂದು
ಮಳೆಯು ಸುರಿದಿತ್ತು, ಹೊಳೆಯು ಹರಿದಿತ್ತು;
ಕೆರೆಯು ತುಂಬಿತ್ತು, ಹೊಲದಿ ಬೆಳೆಯೂ ಇತ್ತು-
ಇಂದೆಲ್ಲಿ ಹೋಯಿತಾ ಸೊಬಗು?
ಇಂದೇಕೆ ಉಡುಗಿತಾ ಬೆಡಗು-ಹೇಳು ಪಾರ್ಥಿವ

ನೆಲದೇವಿ-ಜಲದೇವಿಯರ ಅರಿವಿನಪ್ಪುಗೆಯಲ್ಲಿ
ಗಿಡಮರಕ್ಕೆ ಹಸುರಿತ್ತು, ಖಗಮೃಗಕೆ ಕಸುವಿತ್ತು;
ಪರಿಸರದಿ ಪ್ರಾಣವಿತ್ತು, ಸರಸರದಿ ತ್ರಾಣವೂ ಇತ್ತು-
ಇಂದೆಲ್ಲಿ ಹೋಯಿತಾ ಪ್ರಾಣ?
ಇಂದೇಕೆ ಉಡುಗಿತಾ ತ್ರಾಣ-ಹೇಳು ಪಾರ್ಥಿವ....

ನೆರೆ ಹೊರೆಯ ಮಡಿಲಲ್ಲಿ ಹೊಂದಿ ಬಾಳಿದೆಲ್ಲ
ಜನಮನದಿ ಅನುವಿತ್ತು, ನಡೆನುಡಿಯು ಸಮವಿತ್ತು.
ನಾಲಗೆಗೆ ಬೆಲೆಯಿತ್ತು, ನೆಮ್ಮದಿಗೆ ನೆಲೆಯೂ ಇತ್ತು-
ಇಂದೆಲ್ಲಿ ಹೋಯಿತಾ ಬೆಲೆಯು?
ಇಂದೇಕೆ ಉಡುಗಿತಾ ನೆಲೆಯು-ಹೇಳು ಪಾರ್ಥಿವ...

ಭೂ ಗಂಗೆ ಭೂ ತಳವ ಸೇರಿ
ಮಳೆ ಗಂಗೆ ಶಿವ ತಲೆಯನೇರಿ
ಬೆಟ್ಟ ಬೇಯುತಿಹುದು, ನಾಡು ನರಳುತಿಹುದು;
ಹಣಗಳಿಕೆಯ ದಾಹ ಆಕಾಶಕೇರಿ
ಗುಣ ಮಟ್ಟವದು ಪಾತಾಳಕಿಳಿದು
ದಿನವಹಿಯ ಬಾಳದು
ಸ್ವಾರ್ಥದತ್ತತ್ತ ಜಾರುತಿಹುದು,
ಭರವಸೆಯ ಹಗ್ಗವೂ ಹರಿಯುತಿಹುದು;
ಪಾರ್ಥಿವ ವರುಷ ಪುರುಷಾ!

ನಮ್ಮ ವ್ಯಕ್ತ ಪೂಜೆಯ ಫಲಕಿಂತ
ನಮ್ಮ ಗುಪ್ತ ಕರ್ಮ ಫಲವಧಿಕವಾಗಿ
ಹೀಗಾಗುತಿಹುದೆ, ಇಂತಾಗುತಿಹುದೆ?
ಹೇಳು ಪಾರ್ಥಿವ.....

-ಎಲ್.ನರಸಿಂಹಯ್ಯ ತೊಂಡೋಟಿ.

ವಿಚಾರ ದೀಪ್ತಿ

ಸೆಲ್‌ನಲ್ಲಿ ನುಗ್ಗುವ ಕಾಯಿಲೆಗಳು

ಕಂಪ್ಯೂಟರ್‌ಗಳ ಒಳಕ್ಕೆ ನುಗ್ಗಿ ಹಾವಳಿ ಎಬ್ಬಿಸಬಲ್ಲ ವೈರಸ್‌ಗಳು ಈಗ ಸೆಲ್‌ಫೋನ್ ಒಳಕ್ಕೂ ನುಗ್ಗುವುದನ್ನು ಕಲಿತಿವೆ. ನ್ಯೂಯಾರ್ಕ್, ಕ್ಯಾಲಿಫೋರ್ನಿಯಾಗಳಲ್ಲಿ ಅವು ಸುದ್ದಿ ಮಾಡುತ್ತಿವೆ. ಸದ್ಯ ನಮ್ಮಲ್ಲಿಗೆ ಬಂದಿಲ್ಲ. ಹಾಗೆಂದು ನೆಮ್ಮದಿಯಿಂದಿರಲು ಸಾಧ್ಯವೆ? ಉತ್ತರದ ಶ್ರೀಮಂತ ದೇಶಗಳ ಹೊಸ ಹೊಸ ತಂತ್ರ ಜ್ಞಾನ ನಮ್ಮಲ್ಲಿಗೆ ಬರುವಷ್ಟೇ ಸಲೀಸಾಗಿ ಅದಕ್ಕೆ ಸಂಬಂಧಿಸಿದ ಕಾಯಿಲೆಗಳೂ ಬಂದೇ ಬರುತ್ತವೆ.

ಸೆಲ್‌ಫೋನ್ ಒಳಕ್ಕೆ ವೈರಸ್ ಹೊಕ್ಕಿತೆಂದರೆ ಏನೇನು ಅನರ್ಥ ಆಗುತ್ತವೆ ಎಂಬುದು ಅವರವರ ಊಹೆಗೆ ಬಿಟ್ಟದ್ದು. ನೀವು ಶೇಖರಿಸಿಟ್ಟ ನಂಬರ್‌ಗಳೆಲ್ಲ ಅಪರಾತಪರಾ ಆಗಬಹುದು. ಯಾರದೋ ದೊಡ್ಡ ಮೊತ್ತದ ಬಿಲ್ ನಿಮ್ಮ ಫೋನ್‌ಗೆ ತಗುಲಿಕೊಳ್ಳಬಹುದು. ಸುಳ್ಳು ಸಂದೇಶ ಬರಬಹುದು. ಏನೂ ಆಗಬಹುದು. ಆಗದೇ ಇರಲೂ ಬಹುದು. ಆದರೆ ಏನಾದರೂ ಆದೀತೆಂಬ ಭಯವೇ ನಿಮ್ಮ ಕಿಸೆಗೆ ಇನ್ನಷ್ಟು ಕನ್ನ ಕೊರೆಯಬಹುದು. ವೈರಸ್ ದಾಳಿಯನ್ನು ತಡೆಗಟ್ಟುವಂಥ ಹೊಸ ರಕ್ಷಾ ಕವಚವನ್ನು ನೀವು ಖರೀದಿಸಬೇಕಾಗಿ ಬರಬಹುದು.(ವಿಕಿರಣ ವಿರೋಧಿ ಕವಚಗಳ ಹಾಗೆ.)

ಕಂಪ್ಯೂಟರ್ ಇದ್ದವರು ನಾನಾ ಬಗೆಯ ವೈರಸ್ ನಿರೋಧಕ ಸಾಫ್ಟ್‌ವೇರನ್ನು ಕೊಳ್ಳುತ್ತಾರಲ್ಲ, ಹಾಗೆ ಮೊಬೈಲ್ ಫೋನ್‌ಗಳ ಬಳಕೆದಾರರಿಗೂ ಅಂಥ ಮದ್ದುಗಳು ತಯಾರಾಗುತ್ತವೆ.

ತಂತ್ರಜ್ಞಾನದ ಬಂಧನ ಎಂದರೆ ಪ್ರೇಮ ಬಂಧನಕ್ಕಿಂತ ಕ್ಲಿಷ್ಟದ್ದು. ಮೊದಲು ಅದು ನಿಮ್ಮನ್ನು ವಶೀಕರಣ ಮಾಡುತ್ತದೆ. ನಂತರ ನಿಮ್ಮನ್ನು ದಾಸನನ್ನಾಗಿ ಮಾಡಿಕೊಳ್ಳುತ್ತದೆ. ದಿನದಿನಕ್ಕೆ ಅದು ಹೊಸ ಹೊಸ ರೂಪಗಳಲ್ಲಿ ಬರುತ್ತದೆ. ನಿಮ್ಮನ್ನು ಮೋಹದ ಜಾಲದಲ್ಲಿ ಸುತ್ತುತ್ತ ಹೋಗುತ್ತವೆ. ಅದಕ್ಕೆ ಹೊಸ ಹೊಸ ಪರಿಕರಗಳನ್ನು ಜೋಡಿಸುತ್ತ ಹೋಗುವ, ಇಲ್ಲವೆ ಹಳತನ್ನು ಬದಿಗೊತ್ತಿ ಹೊಸದನ್ನು ಪಡೆಯುವ ಆಸೆಯಾಗುತ್ತದೆ. ಅದಕ್ಕೆ ಬರುವ ಕಷ್ಟಕೋಟಲೆಗಳೆಲ್ಲ ನಮ್ಮದೇ ಕಷ್ಟ ಕೋಟಲೆ ಎಂಬಂತಾಗಿ ಪರದಾಡುವ ಪರಿಸ್ಥಿತಿ ಬರುತ್ತದೆ.

-ನಾಗೇಶ್ ಹೆಗಡೆ.

ಪ್ರಜಾತಂತ್ರದಲ್ಲಿ ವಿಪಕ್ಷಗಳ ತಂತ್ರ ಫಲಕಾರಿಯಾಗಿದೆಯೇ?

– ಸುರೇಂದ್ರ ಕೌಲಗಿ

"ಪ್ರಜಾಪ್ರಭುತ್ವವು ಸರಕಾರವೆಂಬ ಪದ್ಧತಿಗಿಂತಲೂ ಹಿರಿದಾದುದು, ಸಮಾಜ ವ್ಯವಸ್ಥೆಗಿಂತಲೂ ಹಿರಿದಾದುದು, ಅತ್ಯಂತ ಕಡಿಮೆ ಹಿಂಸೆಯಿಂದ ಮಾನವರಲ್ಲಿರುವ ಬುದ್ಧಿಮತ್ತೆ ಹಾಗೂ ಕ್ರಿಯಾಶೀಲತೆಯನ್ನು ಸಮರಸ ಮತ್ತು ಸಮನ್ವಯಗೊಳಿಸುವ ಜೀವನವಿಧಾನವದು. ಪ್ರಜಾಪ್ರಭುತ್ವವೊಂದೇ ಇಡೀ ಮಾನವ ಕುಲಕ್ಕಿರುವ ಶ್ರೇಷ್ಠತಮ ಮಾರ್ಗ. ಅಲ್ಲದೆ, ಪ್ರಕೃತಿ ಮತ್ತು ಮಾನವ ಸ್ವಭಾವಕ್ಕನುಸಾರವಾಗಿಯೂ ಇರುವಂಥದು. ಇಪ್ಪತ್ತೊಂದನೆ ಶತಮಾನದಲ್ಲಿ ಪ್ರಜಾಪ್ರಭುತ್ವದ ಕುರಿತಾಗಿ ಮಾಡಲಾದ ಮರು ಅರ್ಥವಿದು." – ಓರ್ವ ರಾಜಕೀಯ ತತ್ವಜ್ಞಾನಿ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತಾರೂಢ ಪಕ್ಷದಷ್ಟೇ ಮಹತ್ವದ ಪಾತ್ರವನ್ನು ಪ್ರತಿಪಕ್ಷಗಳು ವಹಿಸಬೇಕಾಗುತ್ತದೆಂಬುದು ನಿರ್ವಿದಿತ. ಬೇರೊಂದು ಮಾತಿನಲ್ಲಿ ಹೇಳುವುದಾದರೆ ಪ್ರಜಾಪ್ರಭುತ್ವವೆಂಬ ತೇರನ್ನು ಎಳೆಯಲು ಅಧಿಕಾರರೂಢಪಕ್ಷ ಮತ್ತು ಪ್ರತಿಪಕ್ಷಗಳೆರಡೂ ಕೈಸೇರಿಸ ಬೇಕಾಗುತ್ತದೆ. ಈ ವಿಧಾನದಲ್ಲಿ ಚ್ಯುತಿಯುಂಟಾದರೆ ಪ್ರಜಾಪ್ರಭುತ್ವ ವ್ಯವಸ್ಥೆ ಕೆಟ್ಟುಹೋಗುತ್ತದೆ. ಕಳೆದ ಐದಾರು ದಶಕಗಳಿಂದಷ್ಟೆ ಪ್ರಜಾಪ್ರಭುತ್ವವು ಜಾರಿಗೆ ಬಂದಿರುವ ಭಾರತದ ಮಟ್ಟಿಗೆ ಹೇಳುವುದಾದರೆ ವಿಪಕ್ಷಗಳು ಪ್ರಜಾಪ್ರಭುತ್ವವನ್ನು ಹಾಳುಗೆಡವಬಹುದು ಇಲ್ಲವೆ ಅದನ್ನೊಂದು ಉತ್ತಮ ಹಾಗೂ ಸಹನೀಯ ಆಡಳಿತ ವ್ಯವಸ್ಥೆಯನ್ನಾಗಿ ಮಾರ್ಪಡಿಸಬಹುದು. ಇತ್ತೀಚಿಗಿನ ದಿನಗಳಲ್ಲಿ ವಿಪಕ್ಷಗಳು ಅನುಸರಿಸುತ್ತಿರುವ ನೀತಿ ಯಾವ ಮಾನದಂಡದಿಂದಲೂ ಯೋಗ್ಯವೆಂದು ಹೇಳಲಾಗದು. ಪ್ರತಿಪಕ್ಷಗಳ ನೀತಿ ಅನ್ನುವುದಕ್ಕಿಂತಲೂ ವರ್ತನೆ ಎಂದೆನ್ನುವುದೇ ಹೆಚ್ಚು ಸೂಕ್ತವೆಂದೆನಿಸುತ್ತದೆ. ಅಥವಾ ಸ್ವೇಚ್ಛಾಚಾರವೆಂದೆನ್ನುವುದು ಇನ್ನೂ ಹೆಚ್ಚು ಸೂಕ್ತವೆಂದೆನ್ನಿಸುತ್ತದೆ. ನೀತಿ ಎಂಬ ಶಬ್ದ ಬಹು ಅರ್ಥಗರ್ಭಿತ ಶಬ್ದ. ಆ ಶಬ್ದದ ವ್ಯಾಖ್ಯೆಯನ್ನು ಕನ್ನಡದ ಶ್ರೇಷ್ಠ ಚಿಂತಕ ಡಿ.ವಿ.ಜಿ ಹೀಗೆ ಮಾಡುತ್ತಾರೆ, "ಸ್ವಪ್ರಯುಕ್ತ ಅನ್ಯಪ್ರಯುಕ್ತ ದೃಷ್ಟಿಗಳಿಂದ ಉಭಯ ಅನುಕೂಲವೆಂದು ಗೊತ್ತಾದ ಚರ್ಯಾವಿಧಾನವೆ ನೀತಿ." ನೀತಿಶಬ್ದದ ಈ ಸುಂದರ ವ್ಯಾಖ್ಯೆಯ ಬೆಳಕಿನಲ್ಲಿ ಲೋಕಸಭೆಯಲ್ಲಿಯ ವಿಪಕ್ಷಗಳು ಕೈಗೆತ್ತಿಕೊಳ್ಳುವ ಕ್ರಮಗಳನ್ನು ನೀತಿಯೆಂದು ಕರೆಯಲಾಗದು. ಸಂಸತ್ತಿನ ಬಹಿಷ್ಕಾರದಂಥ ಕ್ರಮಗಳು

ವಿಪಕ್ಷಕ್ಕಾಗಲೀ, ಆಡಳಿತಾರೂಢ ಪಕ್ಷಕ್ಕಾಗಲೀ ಅನುಕೂಲಕರವಾಗಿಲ್ಲ. ಪ್ರತಿಯಾಗಿ ಅದು ಎರಡೂ ಸಮೂಹಕ್ಕೆ ಪ್ರತಿಬಂಧಕವೇ ಆಗಿ ಪರಿಣಮಿಸುತ್ತದೆ. ದೇಶದ ಜಾಗೃತ ಮತದಾರ ಇದನ್ನು ಗಮನಿಸದೆ ಇರಲಾರ. ಇತ್ತೀಚಿನ ವರ್ಷಗಳಲ್ಲಿಯಂತೂ ಶಾಸಕಾಂಗ ಅವ್ಯಾಹತವಾಗಿ ತನ್ನ ಘನತೆಗೆ ತಾನೇ ಚ್ಯುತಿ ಮಾಡಿಕೊಳ್ಳುತ್ತಿದೆ. ಲೋಕಸಭೆಯಲ್ಲಿ ಈಗಿನ ಪ್ರಮುಖ ವಿಪಕ್ಷವಾಗಿರುವ ಎನ್.ಡಿ.ಎ ಇಡೀ ಬಜೆಟ್ ಅಧಿವೇಶನವನ್ನು ಬಹಿಷ್ಕರಿಸಿದ್ದು ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ. ಅಲ್ಲದೆ, ಇದರಿಂದಾಗಿ ಲೋಕಸಭೆ ತನ್ನ ಹೊಣೆಗಾರಿಕೆಗೆ ತಾನೇ ಪೆಟ್ಟು ಕೊಟ್ಟುಕೊಂಡಿದೆ. ಶಾಸಕಾಂಗದ ಗೌರವದ ಅಧಃಪತನಕ್ಕೆ ಅಲ್ಲಿರುವ ವಿಪಕ್ಷಗಳೇ ಬಹುಮಟ್ಟಿಗೆ ಕಾರಣವಾಗಿವೆ. ಒಂದು ಚುನಾವಣೆಯಿಂದ ಇನ್ನೊಂದು ಚುನಾವಣೆಯವರೆಗೆ ವಿಪಕ್ಷಗಳು ಮಾಡುವ ಕೆಲಸಗಳಲ್ಲಿ ಮುಖ್ಯವಾದುದು ಸದನಗಳ ಬಹಿಷ್ಕಾರ, ಇಲ್ಲವೆ ಸದನಗಳಲ್ಲಿ ಗದ್ದಲಮಾಡಿ ಸದನದ ಕಲಾಪಗಳು ನಡೆಯದಂತೆ ಮಾಡುವುದು. ಹಲವಾರು ಬಾರಿ ಸದನವನ್ನೇ ಕುಸ್ತಿಯ ಕಣವನ್ನಾಗಿ ಮಾರ್ಪಡಿಸುವುದು. ಇಂಥ ಅಪ್ರಜಾತಾಂತ್ರಿಕ ಘಟನೆಗಳಿಗೆ ಕೇವಲ ಲೋಕಸಭೆಯೊಂದೇ ಸಾಕ್ಷಿಯಾಗಿಲ್ಲ. ದೇಶದ ಎಲ್ಲಾ ರಾಜ್ಯಗಳ ಎಲ್ಲಾ ವಿಧಾನಸಭೆಗಳೂ ಸಾಕ್ಷಿಯಾಗಿವೆ. ಇತ್ತೀಚೆಗೆ ಪಂಚಾಯತ್ ರಾಜ್ಯ ವ್ಯವಸ್ಥೆ ಬಂದಮೇಲೆ ಜಿಲ್ಲಾಪರಿಷತ್ತುಗಳಲ್ಲಿಯೂ ವಿಪಕ್ಷಗಳ ಅಪ್ರಜಾತಾಂತ್ರಿಕ ಕ್ರಮಗಳು ಕಾಣಬರುತ್ತಿವೆ. ಆದ್ದರಿಂದ ವಿಪಕ್ಷಗಳೆಂದರೆ ಶಾಸನ ಸಭೆಗಳಲ್ಲಿ ಗಲಾಟೆ ಮಾಡುವ ಚುನಾಯಿತ ವ್ಯಕ್ತಿಗಳ ಸಂವಿಧಾನಬದ್ಧ ಸಮೂಹವೆಂದೇ ಪರಿಗಣಿತವಾಗಿದೆ.

ಪ್ರಜಾಪ್ರಭುತ್ವದ ಬೆಳವಣಿಗೆಯ ಪ್ರಾರಂಭಿಕ ಕಾಲದಲ್ಲಿ ವಿಪಕ್ಷವೆಂದರೆ ಭಾವಿ ಸರ್ಕಾರದ ಪಡಿನೆರಳೆಂದೇ ಭಾವಿಸಲಾಗಿತ್ತು. ಪ್ರಜಾಪ್ರಭುತ್ವದ ತವರು ಎಂದು ಭಾವಿಸಲಾಗಿರುವ ಇಂಗ್ಲೆಂಡಿನಲ್ಲಿ ಈ ಭಾವನೆ ಕೇವಲ ಭಾವನೆಯಾಗಿ ಉಳಿಯದೆ ಅದು ದೇಶದ ಪ್ರತ್ಯಕ್ಷ ರಾಜಕಾರಣದ ಭಾಗವೆಂದು ರೂಪ ತಳೆಯಲು ಪ್ರಾರಂಭಿಸಿದ ಮೇಲೆ ವಿಪಕ್ಷಗಳು ಹಾಗೂ ಅದರ ನಾಯಕರು ಭವಿಷ್ಯದ ಸರ್ಕಾರವೆಂದೇ ಪರಿಗಣಿತರಾಗಲಾರಂಭಿಸಿದರು. ಆದ್ದರಿಂದ ಅಧಿಕಾರಾರೂಢ ರಾಜಕೀಯ ಪಕ್ಷದ ನಾಯಕನಿಗೆ ಯಾವೆಲ್ಲ ಸಂಬಳ,ಸೌಲಭ್ಯ,ಅನುಕೂಲತೆಗಳು ದೊರೆಯುತ್ತಿದ್ದವೋ ಅವೆಲ್ಲ ಪ್ರತಿಪಕ್ಷದ ನಾಯಕನಿಗೂ ದೊರೆಯಲಾರಂಭಿಸಿದವು. ಅದೇ ಪದ್ಧತಿಯನ್ನು ಭಾರತದಲ್ಲಿಯೂ ಅಳವಡಿಸಿಕೊಳ್ಳಲಾಯಿತು. ಇದು ಪ್ರಜಾತಂತ್ರ ವ್ಯವಸ್ಥೆಯ ಒಂದು ಭಾಗವಾಗಿಯೇ ಹೋಯಿತು. ಈ ವ್ಯವಸ್ಥೆಯ ನಿರ್ವಹಣೆಗಾಗಿ ಬಜೆಟ್‌ನಲ್ಲಿ ದೊಡ್ಡಮೊತ್ತವನ್ನು ಮೀಸಲಿಡಬೇಕಾದ ಅನಿವಾರ್ಯತೆಯುಂಟಾಯಿತು. ಇದರಿಂದಾಗಿ ಲೋಕಸಭೆ ಮತ್ತು ವಿಧಾನ ಸಭೆಗಳ ಅಧಿವೇಶನದ ಖರ್ಚನ್ನು

ಲೆಕ್ಕಹಾಕಬೇಕಾಗಿ ಬಂತು. ಈ ಲೆಕ್ಕ ಎಲ್ಲಿಂದ ಎಲ್ಲಿಯವರೆಗೆ ಹೋಗಿದೆಯೆಂದರೆ ಅಧಿವೇಶನದ ಒಂದು ಗಂಟೆಯ, ಒಂದು ನಿಮಿಷದ ಖರ್ಚೆಷ್ಟು ಎಂದೆಲ್ಲ ಲೆಕ್ಕ ಹಾಕಬೇಕಾಗಿ ಬಂದಿದೆ. ಲೋಕಸಭಾ ಅಧಿವೇಶನದ ಒಂದು ಗಂಟೆಯ ಖರ್ಚು ಎಷ್ಟೋ ಲಕ್ಷ ರೂಪಾಯಿಗಳಷ್ಟಾಗುತ್ತದೆ. ಆದರೆ ಭಾರತದ ರಾಜಕೀಯ ಪಕ್ಷಗಳು, ಅದರಲ್ಲಿಯೂ ಮುಖ್ಯವಾಗಿ ವಿಪಕ್ಷಗಳು ಎಷ್ಟು ಹೊಣೆಗೇಡಿಗಳಾಗಿವೆಯೆಂದರೆ ಅವುಗಳಿಗೆ ತಾವು ಕೈಗೊಳ್ಳುವ ಸಭಾತ್ಯಾಗಗಳು, ಧರಣಿಗಳು, ಕೂಗಾಟ ಇತ್ಯಾದಿ ಅಸಂವೈಧಾನಿಕ ಕ್ರಮಗಳು ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಎಷ್ಟು ಪರಿಣಾಮಬೀರುತ್ತದೆ ಮತ್ತು ಪ್ರಜಾತಂತ್ರ ವ್ಯವಸ್ಥೆಯ ಸುಗಮ ನಡೆಗೆ ಎಷ್ಟು ಅಡ್ಡಿಯಾಗುತ್ತದೆ ಎಂಬುದರ ಕಲ್ಪನೆಯೇ ಇಲ್ಲದಂತೆ ವರ್ತಿಸುತ್ತವೆ. ಪ್ರಜಾತಂತ್ರ ವ್ಯವಸ್ಥೆ ಭಾರತದಲ್ಲಿ ಜಾರಿಗೆ ಬಂದು ಐದು ದಶಕಗಳಿಗಿಂತ ಹೆಚ್ಚು ಕಾಲ ಕಳೆದಿದ್ದರೂ ಯಾವುದೇ ವಿಪಕ್ಷಗಳಿರಲಿ ಶಾಸನ ಸಭೆಗಳಲ್ಲಿಯ ತಮ್ಮ ವರ್ತನೆಯಲ್ಲಿ ಯಾವ ಸುಧಾರಣೆಯನ್ನೂ ಮಾಡಿಕೊಂಡಿಲ್ಲ. ಲೋಕಸಭೆಯ ಮಟ್ಟಿಗೆ ಹೇಳುವುದಾದರೆ ಲೋಕಸಭಾಧ್ಯಕ್ಷರು ಸದನದ ಸದಸ್ಯರಿಗೆ ಆಗಾಗ್ಗೆ ಬುದ್ಧಿ ಮಾತನ್ನೂ, ವಿಪಕ್ಷಗಳ ಜವಾಬ್ದಾರಿ ಕುರಿತಾದ ಮಾತನ್ನೂ ಹೇಳುತ್ತಲೇ ಇರುತ್ತಾರೆ. ಸ್ವಾತಂತ್ರ್ಯ ಬಂದ ಐವತ್ತನೇ ವರ್ಷದ ಸಂದರ್ಭದಲ್ಲಿ ಆಗ ಲೋಕಸಭಾ ಅಧ್ಯಕ್ಷರಾಗಿದ್ದ ಸಂಗ್ಮಾರ ಅವಧಿಯಲ್ಲಿ ಪ್ರಜಾತಂತ್ರ ವ್ಯವಸ್ಥೆ ಹಾಗೂ ಚುನಾಯಿತ ಸದಸ್ಯರ ಹೊಣೆಗಾರಿಕೆ ಕುರಿತು ಎರಡು ದಿನಗಳ ವಿಶೇಷ ಅಧಿವೇಶನವೇ ನಡೆದಿತ್ತು. ಆ ಅಧಿವೇಶನದಲ್ಲಿ ಲೋಕಸಭೆಯ ಎಲ್ಲ ಐದುನೂರು ಸದಸ್ಯರು ಉತ್ಸಾಹದಿಂದ ಭಾಗವಹಿಸಿ ಪುಂಖಾನುಪುಂಖವಾಗಿ ಭಾಷಣ ಬಿಗಿದಿದ್ದರು. ಈಗ ಅದೇ ಲೋಕಸಭೆಯಲ್ಲಿ ವಿಪಕ್ಷಗಳು ನಡೆದುಕೊಳ್ಳುತ್ತಿರುವ ರೀತಿಯನ್ನು ನೋಡಿದರೆ ಆ ಮಾತುಗಳೆಲ್ಲ ಎಲ್ಲಿ ಹೋದವು, ಆ ವಿಶೇಷ ಅಧಿವೇಶನಕ್ಕಾಗಿ ಆದ ಖರ್ಚಿಗೆ ಯಾರು ಜವಾಬ್ದಾರರು ಎಂಬೀ ಪ್ರಶ್ನೆಗಳಿಗೆ ಈಗ ಉತ್ತರ ಸಿಗುವುದಿಲ್ಲ. ಈ ಪ್ರಶ್ನೆಗಳಿಗೆ ಉತ್ತರಸಿಗದೇ ಇದ್ದರೂ ಪರವಾಗಿಲ್ಲ. ಆದರೆ ನಿರಾಶೆಯ ಸಂಗತಿಯೇನೆಂದರೆ ಅಂದಿನ ಆ ಪ್ರಮುಖ ಅಧಿವೇಶನದಲ್ಲಿ ಮಾತನಾಡುತ್ತ ತಮ್ಮ ಮುಂದೆ ತಾವು ಇಟ್ಟುಕೊಂಡಿದ್ದ ಆದರ್ಶಗಳನ್ನು ವಿಪಕ್ಷಗಳ ಮುಖಂಡರು ಕಾಲ್ಕೆಳಗೆ ಹೊಸೆದು ಹಾಕುತ್ತಿರುವುದು. ಇದಕ್ಕೆ ಜ್ವಲಂತ ಉದಾಹರಣೆಯಾಗಿ ವಾಜಪೇಯಿ ನೇತೃತ್ವದ ಎನ್.ಡಿ.ಎ. ಹದಿನಾಲ್ಕನೇ ಲೋಕಸಭೆಯ ಬಜೆಟ್ ಅಧಿವೇಶನವನ್ನು ಸಂಪೂರ್ಣವಾಗಿ ಬಹಿಷ್ಕರಿಸುವುದು, ಯು.ಪಿ.ಎ.ದ ನಾಯಕರಿಗೂ ಪ್ರಧಾನಮಂತ್ರಿ ಮನಮೋಹನ್‌ಸಿಂಗ್, ಲೋಕಸಭಾ ಅಧ್ಯಕ್ಷ ಸೋಮನಾಥ್ ಚಟರ್ಜಿಯವರು ಎನ್.ಡಿ.ಎ. ನಾಯಕರಿಗೆ ಈ ಪ್ರವೃತ್ತಿಯನ್ನು

ಬಿಟ್ಟು ಅಧಿವೇಶನಕ್ಕೆ ಬರಲು ಅನೇಕ ಬಾರಿ ವಿನಂತಿಸಿಕೊಂಡರೂ ಎನ್.ಡಿ.ಎ. ಬಹಿಷ್ಕಾರದ ತನ್ನ ನಿಲುವಿನಲ್ಲಿ ಯಾವ ಬದಲಾವಣೆಯನ್ನು ಮಾಡಿಕೊಂಡಿಲ್ಲ. ಸೋಮನಾಥ್ ಚಟರ್ಜಿಯವರು "ಓಡಿಹೋಗಬೇಕೆಂಬ ಮನಸ್ಸಾಗುತ್ತಿದೆ, ಆದರೆ ತಾನು ಚುನಾಯಿತ ಪ್ರತಿನಿಧಿಯಾಗಿರುವುದರಿಂದ ಹಾಗೆ ಮಾಡಲು ಸಾಧ್ಯವಾಗುತ್ತಿಲ್ಲ" ಎಂದು ಮನನೊಂದು ನುಡಿದರು. ಪ್ರತಿಪಕ್ಷದ ಬಹಿಷ್ಕಾರ ನೀತಿಯಿಂದಾಗಿ ಉದ್ಯೋಗಭರವಸೆ ಕಾನೂನು, ಮಹಿಳಾ ಮೀಸಲಾತಿ ಕಾನೂನಿಗೆ ಸಂಬಂಧಿಸಿದ ಮಸೂದೆಗಳು ನೆನೆಗುದಿಗೆ ಬಿದ್ದವು.

ಈಗ ಎನ್.ಡಿ.ಎ. ಪಕ್ಷಗಳು ಕೈಗೊಂಡಿರುವ ಅಧಿವೇಶನದ ಬಹಿಷ್ಕಾರವನ್ನು ಕಾಂಗ್ರೆಸ್ ನಾಯಕತ್ವದ ಯು.ಪಿ.ಎ. ಮೈತ್ರಿ ಕೂಟ ಖಂಡಿಸುತ್ತಿದೆ, ಆ ಕ್ರಮವನ್ನು ಪ್ರಜಾತಂತ್ರ ವಿರೋಧಿಯೆಂದೆಲ್ಲ ನಿಂದಿಸುತ್ತಿದೆ. ಆದರೆ ಇದೇ ಕಾಂಗ್ರೆಸ್ ತಾನು ವಿಪಕ್ಷದ ಸ್ಥಾನದಲ್ಲಿದ್ದಾಗ ಸಂಸತ್ತಿನ ಕಾರ್ಯಕಲಾಪಗಳಿಗೆ ಎಷ್ಟು ಬಾರಿ ಬಹಿಷ್ಕಾರ ಹಾಕಿಲ್ಲ? ಇಂಥ ಘಟನೆಗಳು ಲೆಕ್ಕವಿಲ್ಲದಷ್ಟು ಶಾಸನ ಸಭೆಗಳ ಬಹಿಷ್ಕಾರದಂಥ ಪಾಪಕ್ಕೆ ಎಲ್ಲ ರಾಜಕೀಯ ಪಕ್ಷಗಳೂ ಒಳಗಾಗಿವೆ.

ರಾಜಕೀಯ ಪಕ್ಷಗಳು ಪ್ರಯೋಗಿಸುವ ಇನ್ನೊಂದು ತಂತ್ರ ಚುನಾವಣೆಗೆ ಕಾಲವಲ್ಲದಿದ್ದರೂ ತಮ್ಮ ನಾಯಕರ ಅಪರಾಧಗಳನ್ನು, ಭ್ರಷ್ಟಾಚಾರಗಳನ್ನು ಮುಚ್ಚಿಹಾಕಲು ಸಮ್ಮಿಶ್ರ ಸರಕಾರದಿಂದ ಹೊರಬೀಳುವುದಾಗಿ ಹೆದರಿಸುವುದು ಮತ್ತು ತಮ್ಮ ಬೆಂಬಲಿಗರನ್ನು ಕಟ್ಟಿಕೊಂಡು ಜನತಾ ಸಮಾವೇಶಗಳನ್ನು ನಡೆಸುವುದು ಇತ್ಯಾದಿ ಕಾಯಕಗಳಲ್ಲಿ ತೊಡಗುವುದು. ಇದಕ್ಕೆ ಉದಾಹರಣೆಯಾಗಿ ಜಯಲಲಿತಾ, ಲಾಲೂ ಪ್ರಸಾದ್‌ಯಾದವ್, ಮಾಯಾವತಿ, ಬಂಗಾರಪ್ಪ ಮುಂತಾದವರು ಇದ್ದಾರೆ. ತಮ್ಮ ರಾಜಕೀಯ ಅಸಂತೋಷವನ್ನು ವ್ಯಕ್ತಪಡಿಸಲು ತಮ್ಮ ಚುನಾಯಿತ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊಸ ಪಕ್ಷವೊಂದನ್ನು ರಚಿಸಿ ಮರು ಚುನಾವಣೆಯನ್ನು ಉಂಟುಮಾಡುವುದು ಇತ್ಯಾದಿ ನಡದೇ ಇರುತ್ತದೆ. ತಾವು ಯಾವ ಸಮ್ಮಿಶ್ರ ಸರ್ಕಾರದ ಭಾಗವಾಗಿದ್ದಾರೋ ತಮ್ಮ ಸ್ವಾರ್ಥಕ್ಕಾಗಿ ಅದೇ ಸರಕಾರದ ಕೈ ತಿರುಚುವ ಕೆಲಸ ಮಾಡುತ್ತಾರೆ. ಇಂದು ಲೋಕಸಭೆಯಲ್ಲಿರುವ ಎಲ್ಲ ಪಕ್ಷಗಳ ಹಿರಿಯ ನಾಯಕರು ಒಂದಲ್ಲ ಒಂದು ಅಪರಾಧದ ಬಲೆಯಲ್ಲಿ ಸಿಕ್ಕಿಹಾಕಿಕೊಂಡವರೇ ಅಗಿದ್ದಾರೆ. ಅದು ಬಾಬ್ರಿ ಮಸೀದಿ ಉರುಳಿಸಿರುವ ಅಪರಾಧವಾಗಿರಬಹುದು, ಮೇವುಹಗರಣ ಅಪರಾಧವಾಗಿರಬಹುದು, ಭೂ ಕಬಳಿಕೆ ಅಪರಾಧವಾಗಿರಬಹುದು, ವರಮಾನಕ್ಕಿಂತ ಹೆಚ್ಚು ಆಸ್ತಿ ಸಂಪಾದನೆಯ ಅಪರಾಧವಾಗಿರಬಹುದು, ಎದುರಾಳಿಯ ಕೊಲೆ ಮಾಡಿಸಿದ ಅಪರಾಧವಾಗಿರಬಹುದು ಹೀಗೆ ಒಂದಲ್ಲ ಒಂದು ಅಪರಾಧ ಮಾಡಿದವರ

ಕೂಟವೇ ಆಗಿದೆ ಈಗಿನ ೧೪ ನೇ ಲೋಕಸಭೆ. ಎಲ್ಲಿಯವರೆಗೆ ಅಪರಾಧ ಸಿದ್ಧವಾಗಿ ಶಿಕ್ಷೆ ವಿಧಿತವಾಗುವುದಿಲ್ಲವೋ ಅಲ್ಲಿಯ ವರೆಗೆ ಸಂಬಂಧಿಸಿದ ವ್ಯಕ್ತಿ ನಿರಪರಾಧಿ ಎಂಬ ಸೂತ್ರದ ಕೊಡೆ ಹಿಡಿದು ಕೊಂಡು ರಾಜಕಾರಣಿಗಳು ತಮ್ಮ ಅಪರಾಧಗಳಿಂದ ತಮ್ಮ ಮುಖ ಮುಚ್ಚಿಕೊಂಡು ರಾಜಾರೋಷವಾಗಿ ರಾಜಕೀಯವಾಗಿ ಕ್ರಿಯಾಶೀಲರಾಗಿಯೇ ಇದ್ದಾರೆ. ಪ್ರತಿಪಕ್ಷಗಳು ಕೈಗೊಳ್ಳುವ ಯಾವುದೇ ವಿಧಾನವಾಗಿರಲಿ ಅವು ಪ್ರಜಾತಂತ್ರ ವ್ಯವಸ್ಥೆಗೆ ಧಕ್ಕೆಯನ್ನುಂಟುಮಾಡುವಂಥವೇ ಇರುತ್ತವೆ. ಪ್ರೇಮ ಕಲಹದಲ್ಲಿ ಮತ್ತು ರಾಜಕೀಯ ಕ್ಷೇತ್ರದಲ್ಲಿ ಏನು ಮಾಡಿದರೂ ಸರಿ ಎಂಬ ಮಾತು ಒಂದು ಮೌಲ್ಯವಾಗಿ ಜಾರಿಗೆ ಬಂದಿದೆ. ಆದ್ದರಿಂದ ವಿಪಕ್ಷಗಳು ಚುನಾವಣೆ ಸಮಯದಲ್ಲಿ, ಚುನಾವಣಾ ನಂತರ ಶಾಸನ ಸಭೆಗಳಲ್ಲಿ, ಆನಂತರ ಸರಕಾರದ ರಚನೆಯಲ್ಲಿ, ತದನಂತರ ಆಡಳಿತ ನಿರ್ವಹಣೆಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ತಂತ್ರ ಏಕ ಪ್ರಕಾರವಾಗಿರುತ್ತದೆ. ಏನಕೇನ ಪ್ರಕಾರದಿಂದ ಅಧಿಕಾರವನ್ನು ಹಿಡಿಯಬೇಕು, ಗಳಿಸಿದ ಅಧಿಕಾರವನ್ನು ಉಳಿಸಿಕೊಂಡು ಬರಬೇಕೆಂಬುದೇ ಎಲ್ಲ ರಾಜಕೀಯ ಪಕ್ಷಗಳ ಸಿದ್ಧಾಂತವಾಗಿರುತ್ತದೆ. ಅಧಿಕಾರದಾಹದ ಈ ಅಮಲಿನಲ್ಲಿ ರಾಜಕೀಯ ಪಕ್ಷಗಳು ಉಪಯೋಗಿಸುವ ಎಲ್ಲ ತಂತ್ರಗಳು ತತ್ವರಹಿತವಾಗಿರುತ್ತವೆ. ಅವುಗಳು ಸಾಧಿಸಬೇಕೆಂದಿರುವ ಗುರಿಗಳೂ, ಅವು ಉಪಯೋಗಿಸುವ ತಂತ್ರ ಅಥವಾ ಸಾಧನಗಳಿಗೂ ಯಾವ ಸಂಬಂಧವೂ ಇರುವುದಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನಾಗಿ ಬಿಹಾರದ ಮುಖ್ಯಮಂತ್ರಿಯಾಗಿ ಓರ್ವಮುಸ್ಲಿಂ ವ್ಯಕ್ತಿಯೇ ಇರಬೇಕೆಂಬ ರಾಮ್‌ವಿಲಾಸ್ ಪಾಸ್ವಾನ್‌ರವರ ರಾಜಕೀಯ ಹಟವನ್ನು ಗಮನಿಸಬಹುದು. ಸೆಕ್ಯುಲರ್ ದೇಶವೆಂದು ಘೋಷಿಸಿರುವ ಸಂವಿಧಾನ ಆಧಾರದ ಮೇಲೆ ಪ್ರತಿಜ್ಞೆ ತೆಗೆದುಕೊಂಡಿರುವ ಪಾಸ್ವಾನ್‌ರಂಥ ಅನುಭವೀ ರಾಜಕಾರಣಿ ಹೀಗೆ ಒಂದು ಕೋಮಿನವರೇ ಬಿಹಾರದ ಮುಖ್ಯ ಮಂತ್ರಿಯಾಗಬೇಕೆಂದು ರಾಜಕೀಯ ಚದುರಂಗದಾಟವಾಡುತ್ತಿರುವುದು ಎಷ್ಟು ಸಮಂಜಸ? ಇದರ ಪರಿಣಾಮಗಳೇನು ಎಂದು ಅವರು ತಿಳಿದಿಲ್ಲವೆ?

ರಾಜಕೀಯ ಪಕ್ಷಗಳು ತಮ್ಮಲ್ಲಿಯ ಅನೇಕ ಪ್ರಕಾರದ ದೌರ್ಬಲ್ಯಗಳ ಕಾರಣದಿಂದಾಗಿ ಸಾರ್ವತ್ರಿಕ ಚುನಾವಣೆಗಳನ್ನು ಸ್ಪಷ್ಟ ಬಹುಮತ ಪಡೆದು ಸುಭದ್ರವಾದ ಸರಕಾರಗಳನ್ನು ರಚಿಸಲು ವಿಫಲವಾಗುತ್ತವೆ. ಆದರೆ ಹೇಗಾದರೂ ಮಾಡಿ ಅಧಿಕಾರದ ಗದ್ದುಗೆಯ ಮೇಲೆ ಕುಳಿತುಕೊಳ್ಳಬೇಕೆಂಬ ತವಕದಿಂದ ಮಿಶ್ರ ಪಕ್ಷಗಳೊಂದೊಡಗೂಡಿದ ಸಮ್ಮಿಶ್ರ ಸರ್ಕಾರವನ್ನು ರಚಿಸಿ ಕನಿಷ್ಠ ಕಾರ್ಯಕ್ರಮವನ್ನು ರೂಪಿಸಿಕೊಳ್ಳುತ್ತವೆ. ಈ ಪ್ರಕಾರದ ಕನಿಷ್ಠ ಕಾರ್ಯಕ್ರಮವು

ಸರಿಯಾದ ದಿಕ್ಕು ದೆಸೆಯಿಲ್ಲದೆ, ಸಮಗ್ರವಾದ ಗೊತ್ತುಗುರಿಯಿಲ್ಲದೆ ಕೋಟ್ಯಂತರ ರೂಪಾಯಿಗಳ ಖರ್ಚಿಗೆ ದಾರಿಯಾಗುತ್ತದೆಂಬುದನ್ನು ಬಿಟ್ಟರೆ ನೈಜವಾದ ಅಭಿವೃದ್ಧಿ ಸಾಧಿತವಾಗುವುದಿಲ್ಲ. ಸಮ್ಮಿಶ್ರ ಸರ್ಕಾರದ ಕಾರ್ಯವೈಖರಿ ಹಗ್ಗದೆಳೆದಾಟದಂತೆ ಇರುತ್ತದೆ. ಹೇಗೋ ಕಷ್ಟಪಟ್ಟು ರಚಿತವಾಗುವ ಸಮ್ಮಿಶ್ರ ಸರಕಾರ ತನ್ನ ಜೀವತಾವಧಿಯನ್ನು ಲೆಕ್ಕಹಾಕುತ್ತಲೇ ಇರುತ್ತದೆ. ಒಂದು ತಿಂಗಳ ಅವಧಿ ಮುಗಿಯಿತು, ಆರು ತಿಂಗಳ ಅವಧಿ ಮುಗಿಯಿತು, ಒಂದು ವರ್ಷದ ಅಧಿಕಾರಾವಧಿ ಮುಗಿಯಿತು ಎಂಬ ಸಂಭ್ರಮದ ಭ್ರಮೆಯಲ್ಲಿಯೇ ಸಮ್ಮಿಶ್ರ ಸರ್ಕಾರಗಳು ಕಾಲ ನೂಕುತ್ತವೆ. ಈಗ ಕೇಂದ್ರದಲ್ಲಿರುವ ಯು.ಪಿ.ಎ. ಸರ್ಕಾರ ತಾನು ಒಂದು ವರ್ಷದ ಬದುಕಿದ ಹಬ್ಬವನ್ನು ಇದೇ ಮೇ೨೨ ರಂದು ಆಚರಿಸಲು ತೀರ್ಮಾನಿಸಿದೆ. ಅದರೆ ಯು.ಪಿ.ಎ. ಸಮ್ಮಿಶ್ರ ಸರ್ಕಾರದ ಅಂಗಪಕ್ಷಗಳಾದ ಎಡ ಪಂಥೀಯ ಪಕ್ಷಗಳು ಆ ಕಾರ್ಯಕ್ರಮದಲ್ಲಿ ಭಾಗವಹಿಸಲು ನಿರಾಕರಿಸಿದೆ. ಏಕೆಂದರೆ ಎಡ ಪಂಥೀಯ ಪಕ್ಷಗಳ ಅಭಿಪ್ರಾಯದಲ್ಲಿ ಯು.ಪಿ.ಎ. ಸರ್ಕಾರದ ಒಂದು ವರ್ಷದ ಜೀವಿತಾವಧಿಯ ಸಂಭ್ರಮದಲ್ಲಿ ಭಾಗವಹಿಸುವುದೆಂದರೆ ಅಷ್ಟೊಂದು ಸಮಾಧಾನಕರವಾಗಿರದ ಸರ್ಕಾರದ ಕಾರ್ಯಸಾಧನೆಗೆ ಸಮ್ಮತಿಕೊಡುವುದೇ ಆಗಿದೆಯೆಂದು ಭಾವಿಸಿರುವ ಎಡಪಂಥಿಯ ಪಕ್ಷಗಳು ಯು.ಪಿ.ಎ. ಸರ್ಕಾರದ ಸಮಾರಂಭದಲ್ಲಿ ಭಾಗವಹಿಸುತ್ತಿಲ್ಲ. ಈ ಉದಾಹರಣೆಯಿಂದ ಮತದಾರರಾದ ನಮಗೆ ಅನಿಸುವುದೇನೆಂದರೆ ಪ್ರತಿ ಪಕ್ಷಗಳು ಚುನಾವಣೆಯಲ್ಲಿ ಸೋಲುವುದರ ಮೂಲಕ ಸರ್ಕಾರ ರಚನೆಯ ತಮ್ಮ ನೈತಿಕ ಹಕ್ಕನ್ನು ಕಳೆದುಕೊಂಡಿದ್ದರೂ ಕೂಡ ಅಧಿಕಾರ ಮೋಹಕ್ಕೆ ಒಳಗಾಗಿ ಪ್ರಜಾತಂತ್ರದ ಹೆಸರಿನಲ್ಲಿ ಸಮ್ಮಿಶ್ರ ಸರ್ಕಾರ ರಚಿಸುವ ಪ್ರತಿಪಕ್ಷಗಳ ತಂತ್ರ ರಾಜಕೀಯವಾಗಿ ವಿಫಲಗೊಳ್ಳುತ್ತಿದೆ. ಹೀಗೆ ವಿಪಕ್ಷಗಳೇ ಉಪಯೋಗಿಸುತ್ತಿರುವ ಅಪ್ರಜಾತಾಂತ್ರಿಕ ತಂತ್ರಗಳು ನಮ್ಮೀ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಳ್ಳೆಯ ಫಲವನ್ನಂತೂ ಕೊಡಲಾರವೆಂಬುದು ನಿಶ್ಚಿತ. ಏಕೆಂದರೆ ಸುಪ್ರಸಿದ್ಧವಾಗಿರುವ "ಬೇವು ಬಿತ್ತಿ ಮಾವು ಪಡೆಯಬಹುದೇ" ಎಂಬ ಮಾತಿನಕಡೆಗೆ ವಿಪಕ್ಷಗಳ ಹುನ್ನಾರ ಎಷ್ಟು ಕುಚೋದ್ಯದ್ದಾಗಿದೆಯೆಂಬುದನ್ನು ಕೋಟಿ ಸಂಖ್ಯೆಯಲ್ಲಿರುವ ಮತದಾರರು ತಿಳಿಯಬೇಕಿದೆ ಮತ್ತು ಭಾರತದ ಪ್ರಜಾಪ್ರಭುತ್ವಕ್ಕೆ ಹೊಸ ಅಧ್ಯಾಯ ಬರೆಯಬೇಕಿದೆ.

***

ಪು.ತಿ.ನ. ನೋಡಿದ ಮೇಲುಕೋಟೆ.

–ಸುರೇಂದ್ರ ಕೌಲಗಿ.

ಪು.ತಿ.ನ. ರವರ ಕಾವ್ಯ ಸಾಹಿತ್ಯದ ಮೇಲೆ ಅವರ ಜನ್ಮ ಊರಾದ ಮೇಲುಕೋಟೆಯ ಪ್ರಭಾವ ಅತಿಯಾಗಿ ಬಿದ್ದಿದೆ ಎಂಬ ಸಂಗತಿ ಅವರು ಹೇಳಿರುವ ಈ ಮಾತಿನಿಂದ ಸ್ಪಷ್ಟವಾಗುತ್ತದೆ. "ನನ್ನ ರಸವತ್ತಾದ ಭಾಗ ನನಗೆ ಮೇಲುಕೋಟೆಯ ಕೊಡುಗೆ" ಅಂತೆಯೇ ಅವರು ನಿರ್ಮಿಸಿದ ಕಾವ್ಯರಚನೆಯ ಮೇಲೆ ಮೇಲುಕೋಟೆ ಪ್ರಭಾವ ಎಷ್ಟಿತ್ತೆಂಬುದು ಗೊತ್ತಾಗುತ್ತದೆ. ಆದರೆ ನಾವು ಇಂದಿನ ಮೇಲುಕೋಟೆಯನ್ನು ನೋಡಿದರೆ ಈಗಿರುವ ಹೊಸ ಪೀಳಿಗೆಯ ಜನರಿಗೆ ಯಾವುದೇ ಪ್ರಕಾರದ ರಸವತ್ತಾದ ಕೊಡುಗೆಯನ್ನು ಮೇಲುಕೋಟೆ ಕೊಡಬಹುದೇ ಎಂಬ ಸಂಶಯ ಮೂಡುತ್ತದೆ.

ಪು.ತಿ.ನ. ಮೇಲುಕೋಟೆಯನ್ನು ಹೀಗೆ ವರ್ಣಿಸಿದ್ದಾರೆ. ಬೆಟ್ಟ, ಕಣಿವೆಗಳು, ಕೆರೆ, ತೊರೆ, ಪುಷ್ಕರಣಿ ಮತ್ತು ದೇಗುಲಗಳ ಬಹು ಸುಂದರವಾದ ಊರು ಮೇಲುಕೋಟೆ. ಆದರೆ ಈ ಎಲ್ಲ ಸುಂದರ ತಾಣಗಳ ಸ್ಥಿತಿ ಏನಾಗಿದೆ? ಅನಧಿಕೃತ ಗಣಿಗಾರಿಕೆಯ ಕಾರಣದಿಂದ ಬಂಡೆಗಳೆಲ್ಲ ಚೂರಾಗುತ್ತಿದೆ. ಇದು ಎಲ್ಲಿಯವರೆಗೆ ಹೋಗಿದೆ ಎಂದರೆ ಪು.ತಿ.ನ. ರವರು ತಮ್ಮ ೨೪ ಪುಟಗಳ 'ಮಲೆದೇಗುಲ'ವೆಂಬ ಕಾವ್ಯದಲ್ಲಿ ಬಹುಭಕ್ತಿಯಿಂದ

ಒಂದೊಂದು ನಿಲುವಿನೊಳಗೊಂದೊಂದು ಸೊಗವಳಲ
ತೋರಿ ತಿರಿವೀ ಭವದ ನಿಶ್ಚಲ ಕೇಂದ್ರವೇ,
ಋಜು ಅನೃಜು ಋತ ಅನೃತ ಲೇಸು ಕೇಡೆಂಬ ಬೆಲೆ
ಗಳವಡದ ಯೋಗಿಗಳ ಮುದದಿಂ ಸಾಂದ್ರವೇ
ನಿಂತಿಹೆನು ನಾ ನಿನ್ನ ಬಾಗಿಲೆಡೆ ನಮ್ರನಾಗಿ
ನುಡಿ ತುಯ್ದು ಬವಣೆಗೊಳೆ ಭಾವಗಳ ಭಾರದಿಂ ತಲೆಯ ಬಾಗಿ.

ಹೀಗೆಂದು ವರ್ಣಿಸಿದ ಶ್ರೀ ಯೋಗಾನರಸಿಂಹಸ್ವಾಮಿ ಪೀಠಕ್ಕೆ ಧಕ್ಕೆ ಒದಗುವ ಸ್ಥಿತಿ ಉಂಟಾಗಿದೆ. ಇದಕ್ಕೂ ಹೆಚ್ಚಿನ ವಿಷಾದದ ಸಂಗತಿಯೆಂದರೆ ಪು.ತಿ.ನ. ರಂಥ ವರಕವಿಯನ್ನು ಪಡೆದ ಊರು ಇದು ಎಂದು ಹೇಳುವ ಜನರು ನಿಸ್ಸಹಾಯಕರಾಗುತ್ತಿರುವುದು.

ಇಂಥದೇ ಇನ್ನೊಂದು ಉದಾಹರಣೆ ಅಷ್ಟತೀರ್ಥಕ್ಕುಂಟಾಗಿರುವ ದುರ್ದೆಶೆ. ತೊಟ್ಟಿಲು ಮಡುವಿನ ಪ್ರದೇಶದಲ್ಲಿ ನಿಂತು ಪು.ತಿ.ನ.

ಮೂಡಣ ಕಣಿವೆಯ ಹಿಮದವಕುಂಠನ
ರವಿಕರ ಸ್ಪರ್ಶಕ್ಕೆ ಜಾರುತಿದೆ,
ನಾಡದೊ ಹಿಗ್ಗುತ ನಾಚುತ ಮೆಲ್ಲನೆ
ಮೈಸಿರಿಯನು ತಾ ತೋರುತಿದೆ.
ಬನದೊಳು ಕೆರೆಯೊಳು ಕಮರಿಯ ಬುಡದೊಳು
ದಿಗಂತ ವಿಸ್ತೃತ ನಾಡಿನೊಳು,
ಇನನರುಣಾಂಶುಗಳೆಲ್ಲೆಡೆ ಮಿಡಿವುವು
ತರುಜಲಗಳ ನೆರೆ ನಲವಿನೊಲು.

ಎಂಬ ಸಾಲುಗಳಲ್ಲಿ ಕಣಿವೆಯಲ್ಲಿನ ಸೂರ್ಯೋದಯದ ತಮ್ಮ ಅನುಭೂತಿಯನ್ನು ವ್ಯಕ್ತಪಡಿಸಿರಬೇಕು. ಇದೇ ರೀತಿ ಪು.ತಿ.ನ. ಯದುಗಿರಿಯ ಪಡುವಣ ಕಣಿವೆಯ ಬಗ್ಗೆಯೂ ಹೀಗೆ ಬರೆದಿದ್ದಾರೆ.

ಗಿರಿರಾಜನ ಸಾನ್ನಿಧ್ಯದ ನಾಡೊಳು
ಹಗಲಿನೊಳೂ ಸದ್ದಿನಿತಿಲ್ಲ
ಶಬ್ದದ ಶಮವಿದೆ, ಚಲನದ ದಮವಿದೆ
ಸುಮ್ಮಾನದ ಹುಚ್ಚಿನಿತಿಲ್ಲ.

ಆದರೆ ಯದುಗಿರಿಯ ಈ ಮೂಡಣ ಪಡುವಣ ಕಣಿವೆಗಳ ದುಃಸ್ಥಿತಿ ನಮ್ಮ ಹೃದಯ ಭಾರವನ್ನು ಹೆಚ್ಚಿಸುತ್ತಿದೆ. ಆ ಕಣಿವೆಗಳು ತಮ್ಮ ಸಸ್ಯ ಸಂಪತ್ತನ್ನು ಕಳೆದುಕೊಂಡಿದೆ; ಹೆಚ್ಚಾಗುತ್ತಿರುವ ವಾಹನ ಸಂಚಾರಗಳಿಂದ ಪರಿಸರ ಮಲಿನಗೊಳ್ಳುತ್ತಿದೆ. ವನದಲ್ಲಿದ್ದ ತೋಳಗಳು, ನವಿಲುಗಳು, ಮೊಲಗಳು ಕಣ್ಮರೆಯಾಗುತ್ತಿವೆ. ಪು.ತಿ.ನ.ರವರ ಕಾಲದಲ್ಲಿ ತಪಸ್ಸು ಮಾಡುತ್ತಿದ್ದ ಕಣಿವೆಗಳು ಈಗ ನಗ್ನ ನೃತ್ಯ ಮಾಡುತ್ತಿವೆ. ದಳವಾಯಿ ಕೆರೆಯು ತನ್ನ ಒಡಲಲ್ಲಿ ಮುಚ್ಚಿಕೊಂಡಿದ್ದ ಬಂಡೆಗಳನ್ನು ಈಗ ಬಹಿರಂಗಗೊಳಿಸಿದೆ; ಕಲ್ಲು ಕುಟಿಕರನ್ನು ಆಹ್ವಾನಿಸುತ್ತಿದೆ. ಕಲ್ಯಾಣಿ ಸರೋವರ ಮಲಿನಗೊಂಡಿದೆ, ಪ್ರಾಕಾರಗಳೂ ಗೋಡೆಯೂ ಕುಸಿಯುತ್ತಿವೆ; ಭುವನೇಶ್ವರಿ ಅಪಾಯದ ಅಂಚಿನಲ್ಲಿದೆ. ವೈರಮುಡಿ ಉತ್ಸವದ ದಿನವೇ ಪು.ತಿ.ನ.ರವರ ಜನ್ಮದಿನ. ಈ ದಿನದ ಬಗ್ಗೆ ಅವರು ಈ ರೀತಿ ಬರೆದಿದ್ದಾರೆ. "ದೈವವಶಾತ್ ಒಂದು ದೊಡ್ಡ ಉತ್ಸವದ ದಿನ ನಾನಿಲ್ಲಿ ಜನಿಸಿದೆ. ದೈವದ ಒಂದು ಗಾಢವೂ

ಆನಂದ ಸಮೃದ್ಧವೂ ಆದ ಭಾವ ಮೊದಲ ಉಸಿರಿನಲ್ಲಿಯೆ ಆದಿನ ನನ್ನನ್ನು ಹೊಕ್ಕು ನನ್ನ ಇಡೀ ಬದುಕನ್ನು ವ್ಯಾಪಿಸಿತು". ಪು.ತಿ.ನ.ರಲ್ಲಿ ಈ ಭಾವ ಸ್ಫುರಿಸಿ ೧೦೦ ವರ್ಷಗಳಾದವು. ನಂತರ ಅವರ ಕವಿ ಹೃದಯ ಮಾಗಿ ಎಪ್ಪತ್ತೈದು ವರ್ಷಗಳಕಾಲ ಸುದೀರ್ಘವಾಗಿ ಅವರ ಹೃದಯದಿಂದ ಕಾವ್ಯಲಹರಿ ಹರಿದು ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿತು. ಸಹೃದಯದ ಹೃದಯವನ್ನು ಪಾಕಗೊಳಿಸಿತು. ಪು.ತಿ.ನ. ಮುಂದೆ ದೊಡ್ಡವರಾಗಿ ವೈರಮುಡಿಯ ಉತ್ಸವವನ್ನು ನೋಡಿ ಬರೆದ ಸಾಲುಗಳಿವು.

ಚೆಲುವರಾಯನ
ಸುಂದರ ಮುಖ
ದರ್ಶನ ಸುಖ- ಚಿತ್ತಕೆ ॥ಪ॥
ಹೀರ ಮಕುಟ ಮರಕತಹಾರ
ಆಹ ಎಂದೆ ವೇದಾತ್ಮನೆ ಧರಿಸಿಹ ॥ಅ.ಪ॥

ಇಷ್ಟು ಭಕ್ತಿಪರವಶರಾಗಿ ಶ್ರೀ ಚೆಲುವನಾರಾಯಣನನ್ನು ವರ್ಣಿಸಬೇಕಾದರೆ ಪು.ತಿ.ನ.ರ ಕಾಲದಲ್ಲಿ ಉತ್ಸವ ಇಂದಿನಕ್ಕಿಂತ ಹೆಚ್ಚು ಶಿಸ್ತಿನಲ್ಲಿ ನಡೆದಿರಬೇಕು. ಆದರೆ ಇಂದು ವೈರಮುಡಿ ಧರಿಸಿದ ಚೆಲುವನಾರಾಯಣನ ದರ್ಶನ ನಿಜಾರ್ಥದಲ್ಲಿ ಚಿತ್ತಕ್ಕಾಗಲಿ, ದೇಹಕ್ಕಾಗಲಿ, ಸುಖವಾಗಿದೆಯೆ ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತಲಿದೆ. ದರ್ಶನಕ್ಕೆಂದು ಬರುವ ಸಾವಿರಾರು ಭಕ್ತರಿಗೆ ದರ್ಶನಕ್ಕಾಗಿ ಆಗುವ ಶಾರೀರಿಕ ಕಷ್ಟ ಅಷ್ಟಿಷ್ಟಲ್ಲ, ಆ ತಳ್ಳುವ, ನುಗ್ಗಲಾಟಗಳು, ಮಹಿಳೆಯರು, ವೃದ್ಧರು ದುಃಖಿಸುವಂತೆ ಮಾಡುತ್ತವೆ. "ದರ್ಶನ ಸುಖ ಚಿತ್ತರೆ" ಎಂದು ಹೇಳಿದ ಪು.ತಿ.ನ.ರವರೇ ಸ್ವತಃ ಇಂಥ ನುಗ್ಗಾಟಗಳ ಬಲಿಗೆ ತುತ್ತಾಗಿದ್ದನ್ನು ನಾನು ಸ್ವತಃ ಕಣ್ಣಾರೆ ಕಂಡಿದ್ದೇನೆ, ನೋಡಿದ್ದೇನೆ ಅದೇ ಅವ್ಯವಸ್ಥೆ ಇಂದಿಗೂ ಇದೆ. ಈ ಪರಿಸ್ಥಿತಿ ಎಂದು ಉತ್ತಮಗೊಂಡು ಭಕ್ತರೆಲ್ಲ ನೆಮ್ಮದಿಯಿಂದ "ಚಲುವರಾಯನ ದರ್ಶನ ಚಿತ್ತಕ್ಕೆ ಸುಖ" ಎಂದು ಹೇಳಬಲ್ಲರೆಂಬ ದಿನವನ್ನು ನಾವೆಲ್ಲ ಕಾತರದಿಂದ ಎದುರು ನೋಡಬೇಕಿದೆ. ಅಲ್ಲದೆ, ಉತ್ಸವದಲ್ಲಿಯ ಇಂದಿನ ಭಕ್ತಿ ಮಾಯವಾಗಿ ಇಂದು ಅನಾಗರೀಕತೆ ಕಾಣಿಸಿಕೊಂಡಿದೆ. ಈ ಪರಿಸ್ಥಿತಿಯನ್ನು ಉತ್ತಮಪಡಿಸುವಲ್ಲಿ ಪು.ತಿ.ನ.ಸಾಹಿತ್ಯಾಭಿಮಾನಿಗಳ ಹೊಣೆ ಹೆಚ್ಚಾಗಿದೆ.

ಪು.ತಿ.ನ. ಮೇಲುಕೋಟೆಯನ್ನು ಹಲವಾರು ದೃಷ್ಟಿಯಿಂದ ನೋಡಿದ್ದಾರೆ, ಅನುಭವಿಸಿದ್ದಾರೆ. ಅಂಥವುಗಳಲ್ಲಿ ಒಂದು ಮಹತ್ವದ ವಿಚಾರ ಮೇಲುಕೋಟೆಯನ್ನು ಪು.ತಿ.ನ. "ನಮ್ಮಸಂಸ್ಕೃತಿಯ ಸಾರವತ್ತಾದ ಕೇಂದ್ರ" ಎಂದು ಕರೆದುದು. ಈ ಮಾತಿನಲ್ಲಿ ಬಹು ವಿಸ್ತಾರವಾದ ಕಲ್ಪನೆ, ಭಾವನೆ, ಆಶಯ, ಅನುಭವ ಅಡಗಿವೆ.

ಪು.ತಿ.ನ.ಕಾಲದಲ್ಲಿ ಈ ಮಾತು ನಿಜವಾಗಿತ್ತು. ಆದರೆ ನಮ್ಮೀ ಕಾಲದಲ್ಲಿ ನಮ್ಮ ಆ ಸಾರವತ್ತಾದ ಸಂಸ್ಕೃತಿ ನಾಶವಾಗುತ್ತಿದೆ. ಮೇಲುಕೋಟೆಯ ಸಂಸ್ಕೃತಿಯನ್ನು ಎತ್ತಿ ಹಿಡಿದಿದ್ದ ಬಟ್ಟೆ ನೇಯ್ಗೆ ಉದ್ಯಮ ನಶಿಸಿಹೋಗಿ ಕಲಾತ್ಮಕವಾಗಿ ಬಟ್ಟೆ ನೇಯುತ್ತಿದ್ದ ಕೈಗಳು ಇಂದು ಸಿಮೆಂಟ್ ತಾರಿಸುವ ಕರಣಿಗಳನ್ನು ಹಿಡಿದಿವೆ. ಅಷ್ಟೋ ಇಷ್ಟೋ ಇದ್ದ ಸಂಸ್ಕೃತ ಪ್ರೇಮವು ಇಂದು ಸ್ವಾರ್ಥದ ಬಲೆಯಲ್ಲಿ ಸಿಕ್ಕಿಕೊಂಡಿದೆ. ಸಂಗೀತ, ನಾಟ್ಯ, ಚಿತ್ರಕಲೆಗಳು ಹೇಳಹೆಸರಿಲ್ಲದಂತಾಗಿವೆ. ಪ್ರಕೃತಿಯ ಕೈಚಳಕವನ್ನು ತೋರಿಸುತ್ತಿದ್ದ ಬಂಡೆಗಳು ಉಳಿಗೆ ಸಿಕ್ಕಿ ರೋದಿಸುತ್ತಿವೆ.

ಪು.ತಿ.ನ. "ಮೆಲಕು" ಎಂಬ ಲೇಖನದಲ್ಲಿ ೧೯೮೮ರಲ್ಲಿ ಬರೆದಿರುವ ಈ ಮಾತು ನಮ್ಮ ಗಮನ ಸೆಳೆಯಬೇಕಾದುದು ಅಗತ್ಯವಾಗಿದೆ. ಅವರು ಹೀಗೆ ಹೇಳಿದ್ದಾರೆ "ರಜಾದಿನಗಳಲ್ಲಿ ನಾನು ಮೇಲುಕೋಟೆಗೆ ಓಡಿ ಬಿಡುತ್ತಿದ್ದೆ. ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಒಂದು ರಜಾದಿನದಲ್ಲಿ ಮಲೆದೇಗುಲದ ಒಂದು ಏಕಾಂತ ಸ್ಥಳದಲ್ಲಿ ನಿರ್ಜನವಾಗಿರುವ ವೇಳೆ ಮೆಕಾಲೆಪ್ರಣೀತವಾಗಿರುವ ಲಾರ್ಡ್ ಕ್ಲೈವ್‌ನ ಜೀವನಚರಿತ್ರೆಯನ್ನು ಒದಿದುದು ಜ್ಞಾಪಕ. ಎಂಥ ವಿಚಿತ್ರವು, ಸಾಂಕೇತಿಕವು ಆದ ಪ್ರಸಂಗ ಒಬ್ಬ ನಮ್ಮ ದೇಶದ ಸ್ವಾತಂತ್ರ್ಯಹರಣಮಾಡಿ ಸಾಮ್ರಾಜ್ಯ ಕಟ್ಟಿದವನು ಮತ್ತೊಬ್ಬ ನಮ್ಮನ್ನು ಸಾಂಸ್ಕೃತಿಕ ದಾಸಕ್ಕೆ ದೂಡಲು ಹವಣಿಸಿ ಕೃತಾರ್ಥನಾಗುತ್ತಿರುವವನು. ನಮ್ಮ ಸಂಸ್ಕೃತಿಯ ಸಾರವತ್ತಾದ ಕೇಂದ್ರವಾದ ಮಲೆಗುಡಿಯಲ್ಲಿ ಇದರ ಅಧ್ಯಯನ ನನ್ನಿಂದ!"

ಪು.ತಿ.ನ.ರ ಜೀವನದಲ್ಲಿದ್ದ ಈ ವಿಪರ್ಯಾಸ ಇಂದು ನಮ್ಮ ಜೀವನದಲ್ಲಿಯೂ ಕಾಣುತ್ತಿದೆ. ಒಂದೇ ಒಂದು ವ್ಯತ್ಯಾಸವೇನೆಂದರೆ ಪು.ತಿ.ನ. ಆ ಬಗ್ಗೆ ತಮ್ಮ ಸಖೇದಾಶ್ಚರ್ಯವನ್ನು ವ್ಯಕ್ತಪಡಿಸಿದ್ದಾರೆ.
ನಾವು ಆ ವಿಪರ್ಯಾಸವನ್ನು ನಾವು ನಮ್ಮ ನಿಜ ಜೀವನದ ಅಂಗವಾಗಿ ಮಾರ್ಪಡಿಸಿಕೊಂಡು ನಿಶ್ಚಿಂತರಾಗಿದ್ದೇವೆ.

ಇಂದು ಮೇಲುಕೋಟೆಯಲ್ಲಿ ಸಂಸ್ಕೃತ ಮತ್ತು ಕನ್ನಡವನ್ನು ಹೊರಕ್ಕೆ ತಳ್ಳಿ ಕನ್ನಡದ ಮುಗ್ಧ ಮಕ್ಕಳಿಗೆ ಮೆಕಾಲೆಯು ಭಾರತಕ್ಕೆ ತಂದ ಇಂಗ್ಲೀಷ್ ಭಾಷೆಯ ವಿಷವನ್ನು ಉಣಿಸುತ್ತಿದ್ದೇವೆ. ಮೇಲುಕೋಟೆಯಲ್ಲಿ ಇಂಗ್ಲೀಷ್ ಭಾಷಾ ಮಾಧ್ಯಮ ಶಾಲೆಗಳು ತಲೆ ಎತ್ತುತ್ತಿರುವುದೇ ಇದಕ್ಕೆ ಸಾಕ್ಷಿ.

ಮೇಲುಕೋಟೆ ಪುನಃ ಭಾರತದ ಸಂಸ್ಕೃತಿಯ ಕೇಂದ್ರವಾಗುವಂತೆ ಪ್ರಯತ್ನಿಸುವುದೇ ಯದುಗಿರಿ ನಿವಾಸಿಗಳ ಇಂದಿನ ಯುಗಧರ್ಮವಾಗಿದೆ.

***

ಅಂತಾರಾಷ್ಟ್ರೀಯ ಸಾಂಸ್ಕೃತಿಕ ಸಂಬಂಧಗಳು.

-ಜವಾಹರಲಾಲ ನೆಹರು

(ದಕ್ಷಿಣ ಆಫ್ರಿಕಾದ ಸರ್ಕಾರವು ಸ್ಥಾಪಿಸಿರುವ ಓ. ಆರ್. ತಾಂಬೊ ಪ್ರಶಸ್ತಿಯನ್ನು ೨೦೦೫ ಏಪ್ರಿಲ್ ೨೬ ರಂದು ಡರ್ಬಾನ್‌ನಲ್ಲಿ ದಕ್ಷಿಣ ಆಫ್ರಿಕಾದ ಅಧ್ಯಕ್ಷರಾದ ಎಂಬಕಿಯವರು ಮರಣೋತ್ತರವಾಗಿ ಜವಾಹರಲಾಲ್ ನೆಹರುರವರಿಗೆ ಅರ್ಪಿಸಿದರು. ಈ ಪ್ರಶಸ್ತಿಯನ್ನು ನೆಹರುರವರ ಮೊಮ್ಮಗ ರಾಹುಲ್‌ಗಾಂಧಿ ಸ್ವೀಕರಿಸಿದರು. ವಸಹಾತುಶಾಹಿ ಹಾಗೂ ಜನಾಂಗದ್ವೇಷದ ವಿರುದ್ಧ ದಿಟ್ಟ ಹೋರಾಟ ನಡೆಸಿದ ನೆಹರು ಅಲಿಪ್ತ ಚಳುವಳಿಗೂ ಅಗಾಧ ಕಾಣಿಕೆ ಸಲ್ಲಿಸಿದ್ದಾರೆಂದು ಅಧ್ಯಕ್ಷ ಎಂಬಕಿ ಹೇಳಿದರು. ಈ ಸಂದರ್ಭದಲ್ಲಿ ನೆಹರೂರವರ ಗೌರವಾರ್ಥ ನೆಹರೂರವರ ಲೇಖನವೊಂದನ್ನು ಓದುಗರಿಗೆ ಪ್ರಸ್ತುತಪಡಿಸಲಾಗಿದೆ.)

ರಾಷ್ಟ್ರಗಳೂ, ಗುಂಪುಗಳೂ, ವ್ಯಕ್ತಿಗಳೂ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳುವ ಬಗ್ಗೆ ಮಾತಾಡುತ್ತಾರೆ ಇದು ಸಹಜವೂ ಹೌದು. ಆದರೂ ಇತಿಹಾಸದ ಪುಟಗಳನ್ನು ಮಗುಚಿದರೆ ಒಬ್ಬರನ್ನೊಬ್ಬರು ಹೆಚ್ಚು ಅರಿತವರೇ ಹೆಚ್ಚು ಜಗಳವಾಡುತ್ತಾರೆಂದು ಗೊತ್ತಾಗುತ್ತದೆ. ಯುರೋಪಿನಲ್ಲಾಗಲಿ, ಏಷಿಯಾದಲ್ಲಾಗಲಿ, ನೆರೆಹೊರೆಯಲ್ಲಿರುವ ರಾಷ್ಟ್ರಗಳೊಡನೆಯೇ ರಾಷ್ಟ್ರಗಳು ತಿಕ್ಕಾಡುವಂತೆ ಕಾಣುತ್ತದೆ. ಆದ್ದರಿಂದ ತಿಳುವಳಿಕೆಯೊಂದರಿಂದಲೇ ಸ್ನೇಹ ಸಹಕಾರ ಸಿದ್ಧಿಸುವುದಿಲ್ಲ ಎಂದಹಾಗಾಯಿತು.

ಸಾಂಸ್ಕೃತಿಕ ಸಂಪರ್ಕ ಎಂಬ ಮಾತು ಬಹಳವಾಗಿ ಕೇಳಿಬರುತ್ತದೆ. ಈ ಮಾತು ಬಂದಾಗಲೆಲ್ಲ ನನ್ನ ಮನಸ್ಸಿನಲ್ಲಿ ಒಂದು ಪ್ರಶ್ನೆ ಮೂಡುತ್ತದೆ– ಜನರು ಇಷ್ಟೆಲ್ಲಾ ಚರ್ಚಿಸುವ ಈ 'ಸಂಸ್ಕೃತಿ' ಎಂಬ ಪದಾರ್ಥ ಖಚಿತವಾಗಿ ಯಾವುದು?

ನಾನು ತರುಣನಾಗಿದ್ದಾಗ ಜರ್ಮನ್ 'ಕಲ್ಚರ್'(ಸಂಸ್ಕೃತಿ) ಬಗ್ಗೆ ಓದಿದ್ದು ನೆನಪಾಗುತ್ತದೆ. ಈ ಕಲ್ಚರನ್ನು ಹಬ್ಬಿಸುವುದಕ್ಕಾಗಿ ಜರ್ಮನ್ನರು ದಂಡಯಾತ್ರೆ ಕೈಗೊಂಡರು. ಅದನ್ನು ವಿರೋಧಿಸುವುದಕ್ಕಾಗಿ ಇತರರು ಹೋರಾಡಿದರು. ಪ್ರತಿಯೊಂದು ದೇಶವೂ, ವ್ಯಕ್ತಿಯೂ ಸಂಸ್ಕೃತಿಯ ಬಗ್ಗೆ ತನ್ನದೇ ಕಲ್ಪನೆ ಇಟ್ಟುಕೊಂಡಹಾಗೆನಿಸುತ್ತದೆ.

ಸಾಂಸ್ಕೃತಿಕ ಸಂಪರ್ಕ ಎನ್ನುವುದು ಒಳ್ಳೆಯವಿಚಾರವೇ ಸೈ. ಆದರೆ ಹೀಗೆ ಒಂದು ಸಂಸ್ಕೃತಿ ಕಲ್ಪನೆಗೆ ಇನ್ನೊಂದರ ಸಂಪರ್ಕ ಬಂದೊಡನೆ ತಿಕ್ಕಾಟವೇ ಮೊದಲು ಪ್ರಾರಂಭವಾಗುತ್ತದೆ ಎಂಬುದು ಅನುಭವಕ್ಕೆ ಬಂದಿದೆ. ಇದರಿಂದ ಸ್ನೇಹದ ಬದಲು ಮನಸ್ತಾಪ ಉಂಟಾಗುತ್ತದೆ. ಹೀಗೆ ಮೂಲ ಪ್ರಶ್ನೆ ಪ್ರಶ್ನೆಯಾಗಿಯೇ

ಉಳಿಯುತ್ತದೆ–ಸಂಸ್ಕೃತಿ ಎಂದರೇನು? ಇದಕ್ಕೆ ಸರಿಯಾದ ಉತ್ತರ ನನಗೂ ಸಿಕ್ಕಿಲ್ಲ.

ಪ್ರತಿಯೊಂದು ನಾಗರಿಕತೆಯೂ ಒಂದೊಂದು ಸಂಸ್ಕೃತಿಯನ್ನು ಬೆಳಸಿಕೊಂಡಿರುತ್ತದೆ. ಅದರ ಬೇರುಗಳು ಸಾವಿರಾರು ವರ್ಷಗಳ ಹಿಂದೆ ಇದ್ದ ತಲೆಮಾರುಗಳಿಂದ ಸಾಗಿಬಂದಿದೆ. ಒಂದು ನಾಗರಿಕತೆಗೆ ಪ್ರಚೋದನೆ ಕೊಟ್ಟ ಮೂಲ ಪ್ರೇರಣೆಗಳ ಅಚ್ಚಿನಲ್ಲೇ ಪ್ರತಿಯೊಂದು ರಾಷ್ಟ್ರವೂ ರೂಪುಗೊಳ್ಳುತ್ತದೆ. ಈ ಕಲ್ಪನೆಗಳು ಬೇರೆ ಕಲ್ಪನೆಗಳಿಂದ ಪರಿಣಾಮಗೊಂಡಿರುತ್ತವೆ. ಹೀಗೆ ಈ ಬೇರೆ ಬೇರೆ ಕಲ್ಪನೆಗಳ ಪರಸ್ಪರ ಕ್ರಿಯೆಯನ್ನು ನಾವು ಕಾಣುತ್ತೇವೆ.

ಜಗತ್ತಿನಲ್ಲಿ ಯಾವ ಸಂಸ್ಕೃತಿಯೂ ತನ್ನ ಮೇಲೆ ಬೇರೆ ಸಂಸ್ಕೃತಿಯ ಪರಿಣಾಮವಾಗಿಲ್ಲವೆಂದು ಹೇಳುವಂತಿಲ್ಲ. ಯಾವ ವ್ಯಕ್ತಿಯೂ ಹೇಗೆ ತಾನು ನೂರಕ್ಕೆ ನೂರು ಇಂಥದೇ ಕುಲದ ಶುದ್ಧ ರಕ್ತದವನೆಂದು ಹೇಳಿಕೊಳ್ಳಲಾರನೋ ಹಾಗೆಯೇ ಶುದ್ಧ ಸಂಸ್ಕೃತಿ ಎಂಬುದಿಲ್ಲ. ಸಾವಿರಾರು ವರ್ಷಗಳ ಕಾಲದಲ್ಲಿ ಮಿಶ್ರಣಗಳು ಆಗಿಯೇ ತೀರುತ್ತವೆ.

ಅಂತೂ ಒಂದು ರಾಷ್ಟ್ರದ ಸಂಸ್ಕೃತಿಯ ಮೂಲಾಂಶಗಳು ಯಾವಾಗಲೂ ಎದ್ದುಕಾಣುತ್ತಲೇ ಇರಬಹುದಾದರೂ ಸಂಸ್ಕೃತಿಗಳಲ್ಲಿ ಬೆರಕೆ ಇದ್ದೇಇರುತ್ತದೆ. ಈ ಬೆರಕೆ, ಗದ್ದಲವಿಲ್ಲದೆಯಾದರೆ ಅದರಲ್ಲಿ ಕೆಡಕಿಲ್ಲ. ಅದರೂ ಆಗಾಗ್ಗೆ ಹೋರಾಟಗಳಾಗುತ್ತವೆ. ಒಮ್ಮೊಮ್ಮೆ ಒಂದು ಗುಂಪಿನ ಜನರಿಗೆ ಹೊರಗಿನ ಅಥವಾ ಪರಕೀಯ ಪ್ರಭಾವಗಳಿಂದ ತಮ್ಮ ಸಂಸ್ಕೃತಿ ಮುಳುಗಿಯೇಹೋದಿತೆಂಬ ಭಯವಾಗುವುದುಂಟು. ಹೀಗಾದಾಗ ಆ ಗುಂಪಿನವರು ಆಮೆಯ ಹಾಗೆ ತಮ್ಮ ಚಿಪ್ಪಿನೊಳಗೆ ಸೇರಿಕೊಂಡುಬಿಡುತ್ತಾರೆ. ತಮ್ಮ ವಿಚಾರಗಳು ಹೊರಗೆ ಹರಿಯದ ಹಾಗೆ ಮಾಡುತ್ತಾರೆ. ಇದೊಂದು ಅನಿಷ್ಟ ಸ್ಥಿತಿ. ಯಾವುದೂ ನಿಂತ ನೀರಂತಾಗುವುದು ಹಿತವಲ್ಲ. ಸಂಸ್ಕೃತಿಯಂತೂ ನಿಂತನೀರಾದರೆ ಕೇಳುವುದೇ ಬೇಡ.

ಸಂಸ್ಕೃತಿಯಿಂದ ಏನಾದರೂ ಪ್ರಯೋಜನವಾಗಬೇಕಾದರೆ ಅದು ಸಾಕಷ್ಟು ಗಾಢವಾಗಿರಬೇಕು. ಹಾಗಯೇ ಅದರಲ್ಲೊಂದು ಚೈತನ್ಯ ಶಕ್ತಿ ಬೇಕು. ಸಂಸ್ಕೃತಿ ಅನೇಕ ಅಂಶಗಳನ್ನು ಅವಲಂಬಿಸಿರುತ್ತದೆ. ಒಂದು ಸಂಸ್ಕೃತಿಗೆ ಚಾಲನೆ ಕೊಟ್ಟ ಮೂಲ ಪ್ರೇರಣೆಯ ಅಚ್ಚು ಮುಖ್ಯವಾದರೂ ಅನಂತರ ಅದರ ಮೇಲೆ ಭೂಗೋಲ, ಹವಾಮಾನ ಮೊದಲಾದ ಎಷ್ಟೋ ಸಂಗತಿಗಳು ಪ್ರಭಾವ ಬೀರುತ್ತವೆ. ಅರಬಸ್ಥಾನದ ಸಂಸ್ಕೃತಿ ಅಲ್ಲಿಯ ಭೂಲಕ್ಷಣ ಮತ್ತು ಅಲ್ಲಿಯ ಮರಳುಗಾಡುಗಳಿಂದ ಪ್ರಭಾವಿತವಾಗಿ ಬೆಳೆದಿದೆ. ಭಾರತದ ಸಂಸ್ಕೃತಿ, ನಮ್ಮ ಸಾಹಿತ್ಯದಿಂದ ವಿದಿತವಾಗುವಂತೆ, ಹಿಮಾಲಯ ಪರ್ವತಗಳಿಂದಲೂ ಇಲ್ಲಿನ ಅರಣ್ಯ ಮತ್ತು ನದಿ ಮೊದಲಾದವುಗಳಿಂದಲೂ ಪ್ರಭಾವಿತವಾಗಿದೆ.

ವಾಸ್ತುಶಿಲ್ಪ, ಸಂಗೀತ, ಸಾಹಿತ್ಯ-ಇಂಥ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಎರಡು ಸಂಸ್ಕೃತಿಗಳು ಬೆರೆಯಬಹುದು; ಬೆರೆತು ಹೊಸದೊಂದು ಮನೋಹರ ಎರಕವನ್ನು ಹೊಂದಬಹುದು. ಆದರೆ ಯಾವುದು ಸಹಜವಾಗಿ ಬೆಳೆಯುವುದಿಲ್ಲವೋ, ಯಾವುದನ್ನು ಬಡಮೇಲುಮಾಡದೆ ಬೇರೆ ಅಚ್ಚಿನಲ್ಲಿ ಒತ್ತುವುದು ಸಾಧ್ಯವಿಲ್ಲವೋ ಅಂಥ ಕ್ಷೇತ್ರಗಳಲ್ಲಿ ಒತ್ತಾಯ ಬಂದರೆ ಹೋರಾಟ ಅನಿವಾರ್ಯವಾಗಿಯೇ ತಲೆದೋರುತ್ತದೆ. ಹೀಗಾದಾಗ ಸಂಸ್ಕೃತಿಯ ಕಲ್ಪನೆಗೇ ಹೊರತಾದ ರೀತಿಯಲ್ಲಿ ತಮ್ಮ ಚಿಪ್ಪಿನೊಳಗೆ ಹುದುಗಿಕೊಂಡು ಹೊರಗಿನ ಪ್ರಭಾವಗಳನ್ನು ಪೂರ್ತಿ ಬಹಿಷ್ಕರಿಸುವ ಪ್ರವೃತ್ತಿಗಳು ಮೂಡುವುದುಂಟು.

ಭಾರತೀಯ ಇತಿಹಾಸವನ್ನು ನೋಡಿದರೆ, ಈ ದೇಶದ ಮನಸ್ಸು ಹೊರಜಗತ್ತಿಗೆ ಮುಕ್ತವಾಗಿದ್ದಾಗೆಲ್ಲ ಅದು ಅಭಿವೃದ್ಧಿ ಹೊಂದುತ್ತಿದ್ದಂತೆಯೂ ಮನಸ್ಸನ್ನು ಮುಚ್ಚಿಕೊಂಡಾಗ ಅವನತಿ ಹೊಂದುತ್ತಿದ್ದಂತೆಯೂ ಭಾಸವಾಗುತ್ತದೆ. ಬಾಗಿಲನ್ನು ಬಿಗಿಯಾಗಿ ಮುಚ್ಚಿದಷ್ಟೂ ಭಾರತ ಮರಗಟ್ಟುತ್ತಾಹೋಯಿತು. ಬೆಳೆಯುತ್ತಿರುವ ಬದುಕೆಂಬುದು ಚಲನಶೀಲವಾದದ್ದು, ಪರಿವರ್ತನಾಶೀಲವಾದದ್ದು. ಬೆಳವಣಿಗೆಯನ್ನು ತಡೆಯುವುದಕ್ಕೆ ಕಾರಣವಾದದ್ದೆಲ್ಲ ಅದರ ಬುಡವನ್ನೇ ಕೆಡಿಸುತ್ತದೆ.

ಜಗತ್ತಿನಲ್ಲಿ ಮಹನ್ಮಹಾ ಧರ್ಮಗಳು ಆಗಿಹೋಗಿವೆ. ಅವು ಮಾನವಕುಲದ ಮೇಲೆ ಪ್ರಚಂಡಪ್ರಭಾವ ಬೀರಿವೆ. ಆದರೂ ಅವು ಮನುಷ್ಯನನ್ನು ಸ್ಥಾಣುವಾಗಿ, ಹಟವಾದಿಯಾಗಿ, ಮತಭ್ರಾಂತನನ್ನಾಗಿ ಮಾಡಿದ್ದುಂಟು. ಇದರಲ್ಲಿ ಯಾರನ್ನೂ ನಿಂದಿಸುವ ಉದ್ದೇಶ ನನಗಿಲ್ಲ. ಈ ಧರ್ಮಗಳ ಹೇಳಿಕೆಗಳು ಸರಿಯಾಗಿಯೇ ಇರಬಹುದು. ಆದರೆ ಇದೇ ಕೊನೆಯ ಮಾತು, ಇದಕ್ಕಿಂತ ಮುಂದೆ ಏನೂ ಇಲ್ಲ ಎಂದರೆ ಸಮಾಜ ನಿಂತನೀರಾಗುತ್ತದೆ.

ವ್ಯಕ್ತಿಗೂ ಜನಾಂಗಗಳಿಗೂ ರಾಷ್ಟ್ರಗಳಿಗೂ ಒಂದು ಆಳ ಬೇಕೆಂಬುದು ನಿಜ. ಗತಕಾಲದಲ್ಲೇ ಅವುಗಳ ಬೇರುಗಳಿರುವುದೂ ಸಹಜ. ಗತಕಾಲವೆಂದರೆ ತಲೆ ತಲೆಮಾರುಗಳ ಅನುಭವ ಸಂಚಯ. ಅದು ಬೇಕೇ ಬೇಕು.

ಆದರೆ ಬೇರುಗಳ ಮೇಲೆಯೇ ಯಾವುದೂ ಬದುಕಲಾರದೆಂದು ನಾವು ನೆನಪಿಡಬೇಕು. ಗಾಳಿ ಬೆಳಕಿಲ್ಲದಿದ್ದರೆ ಬೇರುಗಳೂ ಸಾಯಬಹುದೆಂದು ನಮಗೆ ಗೊತ್ತಿದೆ. ಗಾಳಿ ಬೆಳಕುಗಳಿಂದಲೇ ಬೇರುಗಳಿಗೂ ಸಾರ ದೊರೆಯಬೇಕು. ಅದರಿಂದಲೇ ಟೊಂಗೆಗಳು ಒಡೆಯಬೇಕು, ಹೂ ಬಿಡಬೇಕು. ಇವೆರಡನ್ನೂ ಸಮತೂಕದಲ್ಲಿಡುವುದೇ ಸಮಸ್ಯೆ. ಕೆಲವರು ನಳನಳಿಸುವ ತಳಿರುಗಳಿಗೆ, ಹೂಗಳಿಗೆ ಹೆಚ್ಚು ಪ್ರಾಧಾನ್ಯ ಕೊಟ್ಟು ಬಲವಾದ ಬೇರು ಇದ್ದದ್ದರಿಂದಲೇ ಮರ ನಿಂತಿದೆ ಎಂಬುದನ್ನು ಮರೆಯುತ್ತಾರೆ. ಇತರರಿಗೆ ಬೇರೇ ಸರ್ವಸ್ವ ; ಟೊಂಗೆ, ಎಲೆ, ಹೂ ಗೌಣ. ಬೇರು-ಟೊಂಗೆಗಳನ್ನು ಸರಿದೂಗಿಸುವುದೇ ಈಗ ಪ್ರಶ್ನೆ.

ಸಂಸ್ಕೃತಿಯೆಂದರೆ ಮನುಷ್ಯನ ಅಂತರಂಗದ ಬೆಳವಣಿಗೆಯೇ? ಖಂಡಿತವಾಗಿ. ಸಂಸ್ಕೃತಿಯೆಂದರೆ ಆತ ಇತರರೂಡನೆ ನಡೆದುಕೊಳ್ಳುವ ರೀತಿಯೇ? ನಿಶ್ಚಯವಾಗಿ. ಇನ್ನೊಬ್ಬನನ್ನು ಅರ್ಥಮಾಡಿಕೊಳ್ಳುವ ಶಕ್ತಿ ಸಂಸ್ಕೃತಿಯಿಂದ ಬರಬೇಕೆ? ನಿಜಕ್ಕೂ. ಇತರರಿಗೆ ಅರ್ಥವಾಗುವಂತೆ ನಡೆದುಕೊಳ್ಳುವುದು ಸಂಸ್ಕೃತಿಯೇ? ಹೌದೆಂದು ತೋರುತ್ತದೆ. ಇವೆಲ್ಲವೂ ಸಂಸ್ಕೃತಿಯಲ್ಲಿ ಅಡಕವಾಗಿವೆ.

ಇನ್ನೊಬ್ಬನ ದೃಷ್ಟಿಕೋಣವನ್ನು ತಿಳಿದುಕೊಳ್ಳಲಾರದವನು ಅಷ್ಟು ಮಟ್ಟಿಗೆ ಮನಸ್ಸು, ಸಂಸ್ಕೃತಿ ಎರಡರಲ್ಲಿಯೂ ಸಂಕುಚಿತ ವ್ಯಕ್ತಿಯಾಗುತ್ತಾನೆ. ಸರ್ವಜ್ಞರೆಂಬುವವರು–ಕೆಲ ತೀರ ಅಪರೂಪ ವ್ಯಕ್ತಿಗಳನ್ನು ಬಿಟ್ಟರೆ– ಯಾರೂ ಸರ್ವಜ್ಞರಿಲ್ಲ. ಎದುರು ಪಕ್ಷದವರಲ್ಲಿಯೂ ಸ್ವಲ್ಪ ಜ್ಞಾನ, ತಿಳಿವಳಿಕೆ, ಸತ್ಯದ ಕಿಡಿ, ಇರಬಹುದು. ಅದನ್ನು ಗ್ರಹಿಸದೆ ಹೋದರೆ ನಾವು ಅಷ್ಟು ಮಟ್ಟಿಗೆ ಬಡವರಾಗುತ್ತೇವೆ ಮಾತ್ರವಲ್ಲ, ಸುಸಂಸ್ಕೃತನಿಗೆ ಅಸಂಗತವಾದ ಮನೋವೃತ್ತಿಯನ್ನು ಬೆಳೆಸಿಕೊಳ್ಳುತ್ತೇವೆ. ಸುಸಂಸ್ಕೃತನಾದ ವ್ಯಕ್ತಿ ಇನ್ನೊಬ್ಬನ ಅಭಿಪ್ರಾಯಗಳನ್ನು ಒಪ್ಪದಿದ್ದರೂ ಅದನ್ನು ಅರ್ಥ ಮಾಡಿಕೊಳ್ಳಬೇಕು. ಒಪ್ಪುವ ಬಿಡುವ ಪ್ರಶ್ನೆ ಅರ್ಥವಾದ ಮೇಲೆ ತಾನೆ?

ಇಲ್ಲಿ ನಾನು ವಿಜ್ಞಾನ ಎಂಬ ಶಬ್ದವನ್ನು ಉಲ್ಲೇಖಿಸಬಯಸುತ್ತೇನೆ. ಸಮಸ್ಯೆಗಳನ್ನು ವೈಜ್ಞಾನಿಕ ದೃಷ್ಟಿಯಿಂದ ವಿವೇಚಿಸುವುದೆಂದರೇನು? ಪ್ರತಿಯೊಂದನ್ನೂ ಪರೀಕ್ಷಿಸಬೇಕು. ಪ್ರಯೋಗ ಮೂಲಕ, ತಪ್ಪು ತಿದ್ದಿಕೊಳ್ಳುವ ರೀತಿಯಿಂದ ಸತ್ಯಶೋಧನೆ ಮಾಡಬೇಕು; ಇದು ಹೀಗೆ ಇರಬೇಕು ಎಂದು ಹಟತೊಡದೆ, ಇದು ಹೀಗೇಕಿದೆ ಎಂದು ಪ್ರಯತ್ನಪೂರ್ವಕವಾಗಿ ಅರ್ಥಮಾಡಿಕೊಂಡು, ಅದು ಹಾಗಿರುವುದೇ ಖಂಡಿತವಾದರೆ ಅದನ್ನು ಒಪ್ಪಿಕೊಳ್ಳಬೇಕು; ವಿರುದ್ಧ ಪ್ರಮಾಣಗಳು ಸಿಕ್ಕಿದೊಡನೆ ತನ್ನ ಅಭಿಪ್ರಾಯಗಳನ್ನು ಬದಲಾಯಿಸಲು ಸಿದ್ಧವಾಗಿರಬೇಕು; ಸತ್ಯ ಎಲ್ಲಿದ್ದರೂ ಸ್ವೀಕರಿಸುವ ಮುಕ್ತ ಮನಸ್ಸು ಇರಬೇಕು. ಇದು ಸುಸಂಸ್ಕೃತಿಯೆಂಬುದು ನಿಜವಾದರೆ ಇಂದಿನ ಜಗತ್ತಿನಲ್ಲಿ, ಇಂದಿನ ರಾಷ್ಟ್ರಗಳಲ್ಲಿ ಸಂಸ್ಕೃತಿ ಎಷ್ಟು ಮಟ್ಟಿಗೆ ಹಬ್ಬಿದೆ? ಈಗಿರುವುದಕ್ಕಿಂತ ಅದು ಹೆಚ್ಚು ಮಟ್ಟಿಗೆ ಹಬ್ಬಿದರೆ ಎಷ್ಟೋ ರಾಷ್ಟ್ರೀಯ ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಹೆಚ್ಚು ಸರಾಗವಾಗಿ ಬಿಡಿಸಬಹುದಿತ್ತೇನೊ.

ಜಗತ್ತಿನ ಪ್ರತಿಯೊಂದು ದೇಶವೂ ತಾನೇ ಈಶ್ವರನ ವಿಶೇಷ ವರಪ್ರಸಾದ ಹೊಂದಿದ ದೇಶವೆಂದೂ ಇತರರು ಎಷ್ಟೇ ಒಳ್ಳೆಯವರಾದರೂ ತುಚ್ಛರೆಂದೂ ನಂಬುತ್ತದೆ. ಪೂರ್ವ ಪಶ್ಚಿಮ ಎರಡೂ ಕಡೆಯ ದೇಶಗಳಲ್ಲಿಯೂ ಈ ಭಾವನೆ ರೂಢಮೂಲವಾಗಿರುವುದು ಆಶ್ಚರ್ಯ. ಪೌರಸ್ತ್ಯ ದೇಶಗಳಲ್ಲಂತೂ ತಾವು ಕೆಲ ವಿಷಯಗಳಲ್ಲಿ ಎಲ್ಲರಿಗಿಂತ ಶ್ರೇಷ್ಠರೆಂಬ ಅಹಂಮನ್ಯತೆ ತುಂಬಾ ದೃಢವಾಗಿದೆ.

ಆದರೆ ಈಗ ಎರಡು ಮೂರು ಶತಮಾನಗಳಿಂದ ಈ ದೇಶಗಳ ತಲೆಗೆ ಪೆಟ್ಟು ಬಿದ್ದಿದೆ. ಅವುಗಳ ತೇಜೋವಧೆಯಾಗಿದೆ, ಶೋಷಣೆಯಾಗಿದೆ. ಆದ್ದರಿಂದ

ತಾವು ಕೆಲವು ವಿಷಯಗಳಲ್ಲಿ ಮಹಾ ಶ್ರೇಷ್ಠರೆಂಬ ಭಾವನೆ ಇನ್ನೂ ಅವುಗಳಲ್ಲಿ ಉಳಿದಿದ್ದರೂ ಕೆಲ ಮಟ್ಟಿಗಾದರೂ ಅವುಗಳಿಗೆ ಬುದ್ಧಿಬಂದಿದೆ.

ವಾಸ್ತವಿಕತೆಯಿಂದ ಪಲಾಯನ ಮಾಡುವುದಕ್ಕೆ ಕೆಲವರು ಒಂದು ವಾದಹೂಡುತ್ತಾರೆ. ನಾವು ಭೌತಿಕ ಮತ್ತು ತಾಂತ್ರಿಕ ವಿಷಯಗಳಲ್ಲಿ ಮುಂದೆ ಹೋಗಿರದಿದ್ದರೇನು? ಅವೇನೂ ಮಹತ್ವದ ವಿಷಯಗಳೇ ಅಲ್ಲ. ನಿಜವಾಗಿ ಮಹತ್ವದ ವಿಷಯಗಳಾದ ಆಧ್ಯಾತ್ಮಿಕ ಮತ್ತು ನೈತಿಕ ವಿಷಯಗಳಲ್ಲಿ ನಮ್ಮನ್ನು ಮೀರಿಸುವವರೇ ಇಲ್ಲ-ಎಂದು. ಸರಿ. ಆಧ್ಯಾತ್ಮಿಕ ಮತ್ತು ನೈತಿಕ ವಿಷಯಗಳು ಕೊನೆಯಲ್ಲಿ ಮಹತ್ವದವುಗಳೇನೋ ನಿಜ. ಆದರೆ ಒಬ್ಬಾತನು ಭೌತಿಕ ವಿಷಯಗಳಲ್ಲಿ ಕೆಳಗಿದಾನೆಂದಾಕ್ಷಣ ಅವನು ಆಧ್ಯಾತ್ಮಿಕ ವಿಷಯಗಳಲ್ಲಿ ಶ್ರೇಷ್ಠನೆಂದೆಣಿಸುವುದೀಗ ಸೋಜಿಗ. ಇದು ತರ್ಕಬದ್ಧವಾದವಲ್ಲ. ಇದು ತನ್ನ ಸೋಲಿಗೆ ಕಾರಣ ಹುಡುಕಲೊಲ್ಲದವನ ಪಲಾಯನವಾದ.

ರಾಷ್ಟ್ರೀಯತೆ ಒಂದು ಮೋಜಿನ ವಸ್ತು. ದೇಶದ ಬೆಳವಣಿಗೆಯ ಒಂದು ಘಟ್ಟದಲ್ಲಿ ಅದು ಪುಷ್ಟಿಯನ್ನೂ ಬಲವನ್ನೂ ಐಕ್ಯವನ್ನೂ ಕೊಡುತ್ತದೆ; ಸಂಗಡಲೇ ಅದು ಅವರನ್ನು ಸಂಕುಚಿತರನ್ನಾಗಿಯೂ ಮಾಡುತ್ತದೆ. ತಮ್ಮ ದೇಶ ಬೇರೆ ದೇಶಗಳಿಗಿಂತ ತೀರ ಭಿನ್ನ ಎಂದೆಣಿಸುವಂತೆ ಮಾಡುತ್ತದೆ. ಉಳಿದೆಲ್ಲ ವಿಚಾರಗಳನ್ನು ಬಿಟ್ಟು ತನ್ನ ಮೇಲ್ಮೆ, ತನ್ನ ಹೋರಾಟ, ತನ್ನ ಬಲದೌರ್ಬಲ್ಯಗಳೇ ಇಡೀ ಮನಸ್ಸನ್ನೂ ವ್ಯಾಪಿಸಿ ಬಿಡುತ್ತವೆ.

ಪರಿಣಾಮವಾಗಿ ಬೆಳವಣಿಗೆಯ ಸಂಕೇತವಾಗಿದ್ದ ರಾಷ್ಟ್ರೀಯತೆಯೇ ಮನಸ್ಸಿನ ಬೆಳವಣಿಗೆ ಮುರುಟಿಕೊಂಡ ಸಂಕೇತವಾಗುತ್ತದೆ. ರಾಷ್ಟ್ರೀಯತೆ ಯಶಸ್ವಿಯಾದಾಗ ಅದು ಪರಾಕ್ರಮದಿಂದ ವಿಸ್ತರಿಸತೊಡಗಿ ಶಾಂತಿಗೆ ಗಂಡಾಂತರ ತರುತ್ತದೆ.

ಹೇಗೆ ಯೋಚಿಸಿದರೂ ಒಂದು ವಿವಿಧ ಸಮತೋಲವನ್ನು ಕಂಡುಹಿಡಿಯದೆ ಉಪಾಯವಿಲ್ಲ ಎಂದು ಮನದಟ್ಟಾಗುತ್ತದೆ. ಇಲ್ಲದಿದ್ದರೆ ಒಳ್ಳೆಯದರಿಂದ ಕೆಟ್ಟದ್ದು ಹುಟ್ಟುತ್ತದೆ. ಈ ಸಮತೋಲವನ್ನು ಹೇಗೆ ಸಾಧಿಸಬೇಕೋ ನಾನರಿಯೆ. ಈ ಕಾಲದ ರಾಜಕೀಯ, ಆರ್ಥಿಕ ಸಮಸ್ಯೆಗಳ ನಂತರ ಇದೇ ಎಲ್ಲಕ್ಕೂ ದೊಡ್ಡ ಸಮಸ್ಯೆಯೆಂದು ನನಗೆ ತೋರುತ್ತದೆ. ಏಕೆಂದರೆ, ಇದರ ಹಿಂದೆ ಮಾನವನ ಆತ್ಮದ ಪ್ರಚಂಡ ಅಂತರ್ದ್ವಂದ್ವವಿದೆ; ಯಾವುದೋ ಅಪ್ರಾಪ್ಯವನ್ನು ಅರಸುವ ತೊಳಲಾಟವಿದೆ.

ಆರ್ಥಿಕ ವಿಷಯಗಳನ್ನು ಯೋಚಿಸದೆ ವಿಧಿಯಿಲ್ಲ. ಮನುಷ್ಯರು ಉಪವಾಸ ಸಾಯುತ್ತಿರುವಾಗ ಸಂಸ್ಕೃತಿಯನ್ನೇ ಏಕೆ, ದೇವರನ್ನು ಚಿಂತಿಸುವುದೂ ಮೌಢ್ಯವಾಗುತ್ತದೆ. ಮೊದಲು ಮನುಷ್ಯನ ಬದುಕಿನ ಅಗತ್ಯತೆಗಳು; ಆ ಮೇಲೆ ಇತರ ವಿಚಾರಗಳು. ಭಾರವನ್ನು ಎಲ್ಲರೂ ಸಮನಾಗಿ ಹೊರುತ್ತಿಲ್ಲ ಎಂದು

ಕಂಡುಬಂದರೆ ಜನರು ಕಷ್ಟ ಕಾರ್ಪಣ್ಯ, ಉಪವಾಸ, ವನವಾಸ ಅಸಮಾನತೆಗಳನ್ನು ಸಹಿಸಲು ಇಂದು ಒಪ್ಪುವುದಿಲ್ಲ. ತಾವು ಭಾರ ಹೊರುವಾಗ ಇತರರು ಲಾಭ ಹೊಡೆಯುವುದೇನು ನ್ಯಾಯ ಎಂದು ಅವರಿಗೆ ತೋರುತ್ತದೆ.

ಈ ಪ್ರಶ್ನೆಗಳಿಗೆ ಸಮಾಧಾನವನ್ನು ನಾವು ಹುಡುಕಲೇಬೇಕಾದರೂ ಮಾನವರ ಮನಸ್ಸಿನಲ್ಲಿ ಇದಕ್ಕೂ ಆಳವಾದ ಮಾನಸಿಕ ಹೋರಾಟಗಳು ಇವೆಯೆಂಬುದು ಖಂಡಿತ. ಕೆಲವರು ಇದನ್ನು ಅರಿತು ಯೋಚಿಸುತ್ತಿರಬಹುದು, ಕೆಲವರನ್ನು ಇದು ಅರಿಯದಂತೆ ಪೀಡಿಸುತ್ತಿರಬಹುದು. ಮಾನವನ ಅಂತರಂಗದಲ್ಲಿ ಈ ದ್ವಂದ್ವ ನಡೆದಿರುವುದಂತೂ ನಿಜ. ಇದಕ್ಕೆ ಪರಿಹಾರ ಮಾತ್ರ ನನಗೆ ಗೊತ್ತಿಲ್ಲ.

ಆದ್ದರಿಂದ ನಿಜವಾದ ಸಂಸ್ಕೃತಿ, ಜಾಣತನ ಎಂದರೇನೆಂದು ನಿರ್ಧರಿಸುವುದನ್ನು ನಿಮಗೇ ಬಿಡುತ್ತೇನೆ. ನಾವು ವಿದ್ಯೆಯಲ್ಲಿ, ಅನುಭವದಲ್ಲಿ, ಪರಿಜ್ಞಾನದಲ್ಲಿ ಬೆಳೆಯತ್ತಲೇ ಇದ್ದೇವೆ. ಅವುಗಳ ಅಗಾಧ ರಾಶಿಯಿಂದಾಗಿ ಈಗ ನಾವು ನಿಜವಾಗಿ ಎಲ್ಲಿದ್ದೇವೆಂದೇ ತಿಳಿಯದಾಗಿದೆ. ಇದರಿಂದ ನಾವು ದಿಕ್ಕೆಟ್ಟಿದ್ದೇವೆ. ಆದರೂ ಒಳಗೊಳಗೇ ನಮಗೆ ಇದೆಲ್ಲ ಮಾನವಕುಲದಲ್ಲಾದ ನಿಜವಾದ ಜ್ಞಾನದ ಬೆಳವಣಿಗೆಯಲ್ಲ–ಎಂದೂ ಪ್ರತೀತವಾಗುತ್ತದೆ.

ಆಧುನಿಕ ಜೀವನದ, ಆಧುನಿಕ ವಿಜ್ಞಾನದ ಸೌಕರ್ಯಗಳನ್ನು ಕಾಣದೆ ಇದ್ದ ಜನರು ನಮ್ಮಲಿನ ಅನೇಕರಿಗಿಂತ ನಿಜವಾಗಿ ಜ್ಞಾನಿಗಳಾಗಿದ್ದರು ಎಂದು ಒಮ್ಮೊಮ್ಮೆ ನನಗೆ ತೋರುವುದುಂಟು. ಮುಂದೆ ಯಾವಾಗಾದರೂ ನಾವು ಈ ಎಲ್ಲಾ ವಿಜ್ಞಾನಜ್ಞಾನವನ್ನು, ಮಾನವ ಜಾತಿಯ ಪ್ರಗತಿಯನ್ನು ನಿಜವಾದ ಜ್ಞಾನವಾಗಿ ಸಂಯೋಜಿಸಲಾಪೆವೇ–ಇದು ನನಗೆ ಗೊತ್ತಿಲ್ಲ. ಅದು ಬಗೆಬಗೆಯ ಶಕ್ತಿಗಳ ಒಂದು ಪಂದ್ಯವಾಗಿದೆ.

ಪ್ರಸಿದ್ಧ ಗ್ರೀಕ್ ಕವಿ ಹೇಳಿದ್ದು ಇಲ್ಲಿ ನನಗೆ ನೆನಪಿಗೆ ಬರುತ್ತದೆ :

ಜ್ಞಾನವೆಂದರೆ ಕಡೆಗೆ ಏನು? ಮಾನುಷ ಸಾಧನೆಗಳಲ್ಲಿ, ದೈವದ ವರಪ್ರಸಾದಗಳಲ್ಲಿ ಯಾವುದ್ಯೆ ಪರಮ ಸುಂದರವು, ಪರಮೋದಾತ್ತ? ಭಯಮುಕ್ತನಾಗಿ ತಲೆಯೆತ್ತಿ ನಿಲ್ಲುವುದು, ದ್ವೇಷಗಳ ಅಲೆಯ ಮೀರಿ ಕೈ ನೀಡಿ ಕರೆವುದು.

ಸಾಭಾರ–ಕಸ್ತೂರಿ. (ಯುನೆಸ್ಕೋ ಕೋರಿಯರ್)

***

ರವೀಂದ್ರರೊಡನೆ ೨೨ ವರ್ಷ

ಗುರುದೇವ ರವೀಂದ್ರರ ವಿಷಯ ನಾನು ಒಂದು ಮಾತಿನಲ್ಲಿ ಇಷ್ಟೇ ಹೇಳಬಲ್ಲೆ: ಅವರು ನನ್ನ ಸರ್ವಸ್ವವಾಗಿದ್ದರು; ನಾನು ಅವರ ಪ್ರೇಮಕ್ಕೆ ಅರ್ಹನಾಗಬೇಕು.

೧೯೪೧ರಲ್ಲಿ ಗುರುದೇವರ ನಿಧನವಾಯಿತು. ಆವರೆಗೆ ನಾನು ಇಪ್ಪತ್ತೆರಡು ವರ್ಷಗಳವರೆಗೆ ಅವರೊಡನಿದ್ದೆ. ಆದರೆ ಒಟ್ಟಿನಲ್ಲಿ ಇಪ್ಪತ್ತೆರಡು ನಿಮಿಷಗಳವರೆಗಾದರೂ ನಾನು ಅವರೊಡನೆ ಮಾತಾಡಿದ್ದೆನೋ ಇಲ್ಲವೋ, ಆದರೂ ಅವರ ಜೀವನ ನನ್ನ ಮೇಲೆ ಅಚ್ಚೊತ್ತಿದೆ. "ಗುರೋಸ್ತು ಮೌನಂ ವ್ಯಾಖ್ಯಾನಂ, ಶಿಷ್ಯಸ್ತು ಚ್ಛಿನ್ನಸಂಶಯಃ" ಎನ್ನುವ ಮಾತಿಗೆ ಇದೊಂದು ಸಾರ್ಥಕ ಉದಾಹರಣೆಯಾಗಿದೆ. ಬಾಲ್ಯದಲ್ಲಿಯೇ ನನ್ನ ತಾಯಿ ನನಗೊಂದು ಮಾತು ತಿಳಿಸಿದ್ದಳು. ಯಾವನೇ ಮಹಾಪುರುಷನ ಹತ್ತಿರ ಹೋಗುವಾಗ ಬಾಯಿಗೆ ಬೀಗ ಹಾಕಿಕೊಂಡು ಹೋಗು– ಎಂಬುದಾಗಿ. ಗುರುದೇವರೊಡನೆ ನಾನು ಈ ಮಾತನ್ನು ಪಾಲಿಸಿದೆ.

ಶಾಂತಿನಿಕೇತನದಲ್ಲಿ ಗುರುದೇವರು ಕೊಟ್ಟ ಕೆಲಸವನ್ನು ನಾನು ಮಾಡುತ್ತಿದ್ದೆ. ಅವರು ಬೆಳಗಿನ ಜಾವ ಮೂರು ಗಂಟೆಯಿಂದ ಆರರವರೆಗೆ ಧ್ಯಾನಸ್ಥರಾಗಿರುತ್ತಿದ್ದರು. ನಾನು ಪ್ರತಿವಾರ ಆರು ಗಂಟೆಗೆ ಧ್ಯಾನ ಸಮಾಪ್ತಿಯ ಕಾಲಕ್ಕೆ ಸರಿಯಾಗಿ ಅವರ ಸನ್ನಿಧಾನದಲ್ಲಿ ಹಾಜರಿರುತ್ತಿದ್ದೆ; ಸ್ವಲ್ಪ ಹೊತ್ತು ಅಲ್ಲಿ ಕುಳಿತಿರುತ್ತಿದ್ದೆ; ಅವರು ಧ್ಯಾನದಿಂದ ಕಣ್ಣುತೆರೆಯುತ್ತಲೆ ನಮಸ್ಕಾರ ಮಾಡಿ ಹೊರಟುಬಂದು ಬಿಡುತ್ತಿದ್ದೆ. ಇದರಿಂದಾಗಿಯೇ ಗುರುದೇವರು ನನಗೆ " ಮೂಕ ಗುರುದಯಾಲ" ಎಂದು ಅಡ್ಡ ಹೆಸರು ಕೊಟ್ಟಿದ್ದರು.

ಗುರುದೇವರೊಡನೆ ನನ್ನ ಭೇಟಿಯೇ ಒಂದು ಅಶ್ಚರ್ಯ.

ನಾನಾಗ ಮುಂಬಯಿಯಲ್ಲಿ ಕಾಲೇಜಿನಲ್ಲಿ ಓದುತ್ತಿದ್ದೆ. ರವಿವಾರ, ಕಾಲೇಜಿಗೆ ರಜಾ ಇತ್ತು. ಬೆಳಿಗ್ಗೆ ಪತ್ರಿಕೆ ಬಂತು. ಎಲ್ಲರೂ ನೋಡಲು ಉತ್ಸುಕರಾಗಿದ್ದರು. ಓದುತ್ತಲೇ ನನ್ನೊಬ್ಬ ಅಣ್ಣ, "ನಮ್ಮ ಒಬ್ಬ ಕವಿಗೆ ನೋಬೆಲ್ ಬಹುಮಾನ ಬಂದಿದೆ," ಎಂದ. ಇನ್ನೊಬ್ಬ, "ಎಲಾ ! ರವೀಂದ್ರನಾಥರ ಹೆಸರನ್ನು ಕೂಡ ನಾನು ಎಂದೂ ಕೇಳಿಲ್ಲವಲ್ಲ," ಎಂದ. ಪ್ರೋಫೆಸರರಲ್ಲಿಯೂ ಒಬ್ಬರು, "ಈ ಮಿಸ್ಟರ್ ಟಾಗೋರ್ ಯಾರು?" ಎಂದು ಪ್ರಶ್ನಿಸಿದರು. ನಾನು ಮೌನವಾಗಿಯೇ ಕೇಳುತ್ತಿದ್ದೆ. ಆಮೇಲೆ ಗೊತ್ತಾಯಿತು–೧೯೦೯ರಲ್ಲಿ ಭಗಿನಿ ನಿವೇದಿತಾ ಅವರು ಬಂಗಾಲಿಯಿಂದ "ಕಾಬೂಲೀವಾಲಾ" ಎಂಬ ಕಥೆಯನ್ನು ಇಂಗ್ಲೀಷಿನಲ್ಲಿ ಅನುವಾದಿಸಿ ಪ್ರಕಟಿಸಿದ್ದರು. ಅದರ ಲೇಖಕರೇ ರವೀಂದ್ರನಾಥ ಠಾಕೂರರು– ಎಂಬುದಾಗಿ.

'ಮಾರ್ಡರ್ನ್ ರಿವ್ಯೂ'ವಿನ ಹಳೇ ಕಡತಗಳಿಂದ ಆ ಕಥೆಯನ್ನು ಹುಡುಕಿ ತೆಗೆದು ಓದಿದ್ದಾಯಿತು. ಕಥೆಯೆಂದರೆ ಕಥೆ ಅದು.

ರವೀಂದ್ರನಾಥರ ಚಿತ್ರವನ್ನು ನೋಡಿದೆ. ಆ ಕ್ಷಣವೇ ನನ್ನ ಅಂತರಂಗ ಹೇಳಿತು: "ಈ ವ್ಯಕ್ತಿಯೊಡನೆ ನಿನಗೆ ಜೀವನದಲ್ಲಿ ವಿಶೇಷ ಋಣಾನುಬಂಧ ಇದೆ."

ನಾನು ಅಂದೇ ಗುರುದೇವರಿಗೆ ಒಂದು ಕಾರ್ಡನ್ನು ಬರೆದು ಹಾಕಿದೆ. ದೀನಬಂಧು ಆಂಡ್ರೂಸರ ಕೈಬರಹದಲ್ಲಿ ಉತ್ತರವೂ ಬಂತು. ಗುರುದೇವರು ಬರೆಸಿದ್ದರು: "ಮೊದಲು ನಿನ್ನ ಓದು ಮುಗಿಸು. ಆ ಮೇಲೆ ಇಲ್ಲಿ ಬಂದು ಮೂರು ತಿಂಗಳು ಇರು. ಆ ಮೇಲೆ ಇಲ್ಲೇ ಉಳಿಯಬೇಕೋ ಬೇಡವೋ ನಿರ್ಣಯ ಮಾಡಬಹುದು."

ಆಗ ಶಾಂತಿನಿಕೇತನಕ್ಕೆ ಹೋಗುವುದು ತಪ್ಪಿತು. ಮೂರು ನಾಲ್ಕು ವರ್ಷಗಳ ನಂತರ ನನ್ನ ಬಿ.ಎ. ಆಯಿತು. ಆದರೆ ಒಳಗಿಂದಲೇ ಒಂದು ದನಿ, "ಬಿ.ಎ.ಮಾಡಿದೇನೋ ಸರಿ. ಆದರೆ ನಿನ್ನ ಸಂಸ್ಕೃತಿಯ ಬಗ್ಗೆ ನಿನಗೆ ಏನೂ ಗೊತ್ತಿಲ್ಲ," ಎಂದಿತು. ಮನಸ್ಸು ಚಡಪಡಿಸತೊಡಗಿತು. ಶಾಂತಿನಿಕೇತನಕ್ಕೆ ಹೋಗುವ ವಿಚಾರ ತಂದೆಯವರಿಗೆ ಹೇಳಿದೆ. ಅವರು ನನ್ನನ್ನು ಕರಾಚಿಗೆ ಕರೆಸಿದರು. ಮನಸ್ಸಿನಲ್ಲಿ ಅದೇ ಆತುರ, ಆಶಂಕೆ. ಈ ನಡುವೆ ಕರಾಚಿಯಲ್ಲಿ ನನಗೆ ತೀವ್ರ ಅಸ್ವಸ್ಥವಾಯಿತು. ಕಳೇವರವನ್ನು ನೆಲದ ಮೇಲೆ ಹಾಕುವವರೆಗೂ ಆಯಿತು. ಆಗ ತಂದೆಯವರು ಕೇಳಿದರು: "ಮಗೂ, ನಿನ್ನ ಮನಸ್ಸಿನಲ್ಲಿ ಏನಾದರೂ ಆಸೆ ಇದೆಯೆ?"

ಆ ಅತ್ಯವಸ್ಥೆಯಲ್ಲಿಯೂ ನಾನು, "ನನಗೆ ಶಾಂತಿನಿಕೇತನಕ್ಕೆ ಹೋಗಲು ನೂರು ರೂಪಾಯಿ ಬೇಕು," ಎಂದೆ. ತಂದೆಯವರು ಪ್ರೀತಿಯಿಂದ, "ನೂರು ಯಾಕೆ, ಸಾವಿರ ಬೇಕಾದರೂ ಕೊಡುತ್ತೇನೆ. ಮೊದಲು ಸೌಖ್ಯವಾಗಲಿ," ಎಂದು ಮಾತುಕೊಟ್ಟರು. ದೇವರ ದಯೆಯಿಂದ ನಾನು ಸೌಖ್ಯವಾದೆ. ತಂದೆಯವರು ಹಣವನ್ನೂ ಕೊಟ್ಟರು. ತಂತಿ ಕೊಟ್ಟೆ. ಐದು ದಿನಗಳ ಯಾತ್ರೆಯ ನಂತರ ಶಾಂತಿನಿಕೇತನವನ್ನು ಹೋಗಿ ತಲುಪಿದೆ.

ಬೋಲಪುರ ಸ್ಟೇಶನ್ನಿನಿಂದ ನಡೆಯುತ್ತಾಹೋಗಿ ಶಾಂತಿನಿಕೇತನವನ್ನು ಮುಟ್ಟಿದವನೇ ಒಬ್ಬ ಮಹನೀಯರನ್ನು "ಗುರುದೇವರು ಎಲ್ಲಿರುತ್ತಾರೆ?" ಎಂದು ಕೇಳಿದೆ.

"ಗುರುದೇವರು ಚಿಕಿತ್ಸೆಗಾಗಿ ಕಲಕತ್ತೆಗೆ ಹೋಗಿದ್ದಾರೆ. ಅವರಿಗೆ ಸೌಖ್ಯವಿರಲಿಲ್ಲ," ಎಂದು ಉತ್ತರ ಬಂತು. ನನ್ನ ಉತ್ಸಾಹದ ಮೇಲೆ ತಣ್ಣೀರೆರಚಿದಂತಾಯಿತು. ನಾನು ಕೂಡಲೆ ಕಲಕತ್ತೆಗೆ ಹೋಗಬೇಕೆಂದಿದ್ದೆ. ಆದರೆ ಅಷ್ಟರಲ್ಲಿ ದೀನಬಂಧು ಆಂಡ್ರೂಸರು ಬಂದರು. ಅವರು ಹೇಳಿದ ಪ್ರಕಾರ ಅಲ್ಲಿಯೇ ಉಳಿದೆ.

ಗುರುದೇವರು ಮರಳಿ ಬಂದ ನಂತರ ದೀನ ಬಂಧುಗಳು ನನ್ನ ಬಗ್ಗೆ ಅವರಿಗೆ ಹೇಳಿದರು. ೧೨ಗಂಟೆಗೆ ಅವರನ್ನು ಕಾಣಬೇಕೆಂದು ಗೊತ್ತಾಯಿತು. ನಾನು ೧೧-೩೦ಕ್ಕೇ ಊಟ ಮುಗಿಸಿ ಗುರುದೇವರ ನಿವಾಸದ ಮೆಟ್ಟಿಲಲ್ಲಿ ಕುಳಿತುಬಿಟ್ಟೆ. ಆಂಡ್ರೂಸರು ೧೧-೫೫ಕ್ಕೆ ನನ್ನನ್ನು ಅಲ್ಲಿ ನೋಡಿ ಕವಿಯೊಡನೆ ಮಾತಾಡಿ ನನ್ನನ್ನು ಕರೆದರು. ಮೇಲೆ ಹೋದೆ. ಗುರುದೇವರು ಪದ್ಮಾಸನ ಹಾಕಿ ಅಚಂಚಲರಾಗಿ ಕುಳಿತಿದ್ದರು. ವಾತಾವರಣ ಸ್ತಬ್ಧವಾಗಿತ್ತು. ನಾನು ನಮಸ್ಕರಿಸಿ ದೀನಬಂಧುಗಳ ಬಳಿ ನಿಂತುಕೊಂಡೆ.

ಮಿನಿಟಾಯಿತು, ಎರಡು ಮಿನಿಟಾಯಿತು, ಮೂರಾಯಿತು-ಗುರುದೇವರು ಮೌನವಾಗಿಯೇ ಇದ್ದರು. "ಅಯ್ಯೋ ಇದೇನು ಅವಸ್ಥೆ. ದೇವಾ, ಇಷ್ಟು ದೂರ ಕರೆಸಿಯೂ ನಿರಾಶನನ್ನಾಗಿ ಮಾಡುವಿಯಾ," ಎಂದು ಮನಸ್ಸು ಅಳತೊಡಗಿತು.

ದೀನಬಂಧುಗಳು ಸನ್ನೆ ಮಾಡಿ ಇನ್ನೂ ಒಂದು ನಿಮಿಷ ಇದೆ ಎಂದರು. ಅಷ್ಟು ಹೊತ್ತಿಗೆ ಗುರುದೇವರು ನನ್ನ ನೆತ್ತಿಯ ಮೇಲೆ ಕೈಯಿಟ್ಟು "I have known you for ages.The seat for you in my Ashram has been vacant for long. When will you occupy it ?" ಹೇಳಿದರು: " ನಾನು ನಿನ್ನನ್ನು ಜನ್ಮ ಜನ್ಮಾಂತರಗಳಿಂದಲೂ ಬಲ್ಲೆ. ನನ್ನ ಆಶ್ರಮದಲ್ಲಿ ನಿನಗಾಗಿ ಎಷ್ಟೋ ಕಾಲದಿಂದ ಸ್ಥಾನ ಖಾಲಿ ಇದೆ. ಯಾವಾಗ ಅದನ್ನು ತುಂಬುವಿ?"

ಇಷ್ಟೇ, ನನ್ನ ಹಳೇ ಬದುಕು ಆ ಕ್ಷಣದಲ್ಲಿ ಮುಗಿದುಹೋದಂತೆ ತೋರಿತು. ಹೊಸ ಜೀವನ ಲಭ್ಯವಾಯಿತು. ನಾನು ಗುರುದೇವರ ಪಾದಗಳ ಮೇಲೆ ಬಿದ್ದೆ. ದೇವರ ಸಾಕ್ಷಿಯಾಗಿ ಪ್ರತಿಜ್ಞೆ ಮಾಡಿದೆ: "ನಾನು ನಿನ್ನವ, ನೀನು ನನ್ನವ."

"ಹಾಗಾದರೆ ಯಾವಾಗ ಇಲ್ಲಿ ಬರುತ್ತೀ," ಎಂದು ಗುರುದೇವರು ಕೇಳಿದರು.

ನಾನೆಂದೆ, "ಕರಾಚಿಗೊಮ್ಮೆ ಹೋಗಿ ನೌಕರಿಗೆ ರಾಜೀನಾಮೆ ಕೊಟ್ಟು ಒಂದು ತಿಂಗಳಲ್ಲಿ ಬಂದು ಬಿಡುತ್ತೇನೆ."

ತಿಂಗಳೊಪ್ಪೊತ್ತಿನಲ್ಲಿ ನಾನು ತಿರುಗಿ ಬಂದು ಬಿಟ್ಟೆ. ನಾನು ಆಶ್ರಮದ ವಿದ್ಯಾಲಯದಲ್ಲಿ ಇಂಗ್ಲೀಷ್ ಪಾಠ ಹೇಳಬೇಕೆಂದು ಅಪ್ಪಣೆಯಾಯಿತು. ಈ ಸೂಚನೆ ಕೊಡುತ್ತಾ ಗುರುದೇವರು ಹೇಳಿದರು: " ಒಂದು ಮಾತು ನೆನಪಿರಲಿ ನಾವು ಮೊಟ್ಟ ಮೊದಲು ಮನುಷ್ಯರು; ಆಮೇಲೆ ವಿದ್ವಾಂಸರು." ಆ ಮೇಲೆ ಅವರು ಮುಂದುವರೆಸಿದರು: "ಪ್ರೇಮ, ಪ್ರೇಮ, ನಿಸರ್ಗದೊಡನೆ ಪ್ರೇಮ, ಪ್ರಭುವಿನೊಡನೆ ಪ್ರೇಮ, ಎರಡರ ನಡುವೆ ಮಾನವ ಪ್ರೇಮ, ಯಾವಾತನು ಇವು ಮೂರನ್ನು ಪ್ರೇಮಿಸಲು ಕಲಿಯುತ್ತಾನೋ ಅವನು ಶಾಂತಿನಿಕೇತನದ ಧ್ಯೇಯವನ್ನು ಸಾರ್ಥಕ ಮಾಡುತ್ತಾನೆಂದು ನನ್ನ ಮತ."

ಹೀಗೆ ನನಗೆ ಅಖಂಡ ಪ್ರೇಮದ ದೀಕ್ಷೆ ದೊರೆಯಿತು. ಶಾಂತಿನಿಕೇತನದ ಜೀವನದಲ್ಲಿ ಪ್ರೇಮವೇ ಸರ್ವಸ್ವವಾಗಿತ್ತು. ಪ್ರೇಮದ ಮಾಧ್ಯಮದಿಂದಲೇ ಶಾಂತಿನಿಕೇತನದ ಧ್ಯೇಯ ರೂಪುಗೊಳ್ಳುತ್ತಿತ್ತು. ಸಂಗಡಲೇ ಆತ್ಮದ ಸ್ವಾತಂತ್ರ್ಯವೂ.

ಇಂದು ಶಾಲೆ ಕಾಲೇಜುಗಳಲ್ಲಿ ವಿಧ್ಯಾರ್ಥಿಗಳನ್ನು ಸ್ಟೀಮರೋಲರಿನಿಂದ ಏಕರೂಪವಾಗಿ ಮಾಡಲಾಗುತ್ತಿದೆ. ಇದನ್ನು "ಸ್ಟಾಂಡರ್ಡೈಸೇಶನ್"ಎಂದು ಕರೆಯಲಾಗುತ್ತದೆ. ಆದರೆ ನಿತ್ಯಕಾರ್ಯಗಳಲ್ಲಿ "ರೂಟೀನ್" ಮತ್ತು "ಸ್ಟಾಂಡರ್ಡೈಸೇಶನ್" ಇವೆರಡೂ ಆಂತರಿಕ ಜೀವನದ ಶತ್ರುಗಳಾಗಿರುತ್ತವೆ. ಅಧ್ಯಯನ ಅಧ್ಯಾಪನಾಕಾರ್ಯಗಳು ಅನಿರ್ಬಂಧವೂ ಉನ್ಮುಕ್ತವೂ ಆಗಿರಬೇಕು. ಶಿಷ್ಯರ ನಡುವೆ ಪ್ರವೇಶಿಸಿದೊಡನೆ ಅಧ್ಯಾಪಕರಿಗೆ ಒಂದು ತಾಜಾತನ ಅನುಭವಕ್ಕೆಬರಬೇಕು. ಅಧ್ಯಾಪಕರು ತಮ್ಮ ಬಾಳಿನ ಮೂಲಕ, ಪ್ರೇಮದ ಮೂಲಕ ಕಲಿಸಬೇಕು. ಶಿಷ್ಯರು ಗುರುಗಳ ಕೃಪೆಯಿಂದ ಕಲಿಯಬೇಕು. ಇಂದು ಪುಸ್ತಕಗಳೆಷ್ಟು, ಗೈಡುಗಳೆಷ್ಟು ! ಇವುಗಳನ್ನು ಕಟ್ಟಿಕೊಂಡು ಎಲ್ಲರೂ ಆತ್ಮವಂಚನೆ ಮಾಡಿಕೊಳ್ಳುತ್ತಾರೆ. ಇಂದು ಜ್ಞಾನದಾನಕ್ಕೆ ಸಿನೆಮಾ, ರೇಡಿಯೋ, ಟೆಲಿವಿಷನ್ ಮೊದಲಾದ ಬೇಕಾದಷ್ಟು ಬಾಹ್ಯ ಸಾಧನಗಳಿವೆ. ಆದರೆ ಒಳಗೆ ಕುಳಿತಿದ್ದಾನಲ್ಲ, ಅವನಿಗೆ ಇದಾವುದರಿಂದಲೂ ತೃಪ್ತಿ ಸಿಗುವುದಿಲ್ಲ. ಆದರೆ ಗುರುದೇವರು, "ಈ ಸಂಸ್ಥೆಯಲ್ಲಿ ವಾಸಿಸುವಾಗ ವಿದ್ಯಾರ್ಥಿಗಳಿಗೆ ಪರಮಾತ್ಮನ ಅಂತಃಪ್ರತೀತಿ ಆಗಬೇಕು" ಎನ್ನುತ್ತಿದ್ದರು. "ಈ ಸಂಸ್ಥೆ ದೇವರ ಇಚ್ಛೆಯ ಪ್ರತಿಬಿಂಬ, ನನ್ನ ಇಚ್ಛೆಯದಲ್ಲ," ಎಂದೂ ಹೇಳುತ್ತಿದ್ದರು.

ಗುರುದೇವರ ಎಷ್ಟೋ ನೆನಹುಗಳು ಬರುತ್ತವೆ. ಶಾಂತಿನಿಕೇತನದಲ್ಲಿ ಅವರು ಇದ್ದಾಗ ಒಂದೊಂದು ದಿನ ಸಂಜೆ ಅವರೊಡನೆ ಚಹಾಪಾನಕ್ಕೆ ನಮಗೆ ಆಮಂತ್ರಣವಿರುತ್ತಿತ್ತು. ಒಂದು ಸಂಜೆ ನಡೆದದ್ದಿದು: ಎಲ್ಲರೂ ಗುರುದೇವರ ಮುಂದೆ ಕುಳಿತಿದ್ದೆವು. ನನ್ನ ಸಲುವಾಗಿ ಅವರು ಕಪ್ಪಿನಲ್ಲಿ ಚಹಾ ಸುರಿಯುತ್ತಿದ್ದರು. ಮಧ್ಯದಲ್ಲಿಯೇ ಒಮ್ಮಿಂದೊಮ್ಮೆ ಅವರು ಗುಣು ಗುಣು ಪ್ರಾರಂಭಿಸಿದರು. ಎಲ್ಲರೂ ಸದ್ದಿಲ್ಲದೆ ಅಲ್ಲಿಂದ ಹೊರಬಿದ್ದು ಹೋದರು. ನಾನು ಮಾತ್ರ ಒಂದು ಮರದ ಕೆಳಗೆ ನಿಂತುಕೊಂಡು ಅವರೇನೇನು ಮಾಡುತ್ತಾರೆಂದು ನೋಡತೊಡಗಿದೆ. ಹದಿನೈದು ನಿಮಿಷಕಾಲ ಅವರು ಗುಣು ಗುಣಿಸುತ್ತಾ ತಲೆಆಡಿಸುತ್ತಾ ತಾಳಹಾಕುತ್ತಿದ್ದರು. ಆಮೇಲೆ ಗುಣು ಗುಣಿಸುವುದು ನಿಂತಿತು. ಏನನ್ನೋ ಬರೆಯತೊಡಗಿದರು. ಬರೆಯುವುದಾದಮೇಲೆ ಅವರು ಕೂಗಿದರು: "ದೀನೂಬಾಬುವನ್ನು ಕರೆಯಿರಿ".

ಸಂಗೀತಜ್ಞ ದೀನೂಬಾಬುವಿಗೆ ಅವರು ಅದೇ ಬರೆದ ಗೀತವನ್ನು ಕಲಿಸಿದ್ದಾಯಿತು. ಮರುದಿನವೇ ಆಶ್ರಮದ ಮಕ್ಕಳೆಲ್ಲ ಅದನ್ನು ಹಾಡತೊಡಗಿದರು.

ಗುರುದೇವರು ಗುಣಗುಣಿಸುವುದನ್ನು ನಾನು ನೋಡುತ್ತಲೇಯಿದ್ದರೂ ಇಂಥಾ ಸಂದರ್ಭಗಳಲ್ಲಿ ನಿಮಗೆ ಏನಾಗುತ್ತಿರುತ್ತದೆಂದು ಕೇಳುವ ಧೈರ್ಯವಾಗಲಿಲ್ಲ. ಎಷ್ಟೋ ವರ್ಷಗಳ ನಂತರ ಒಮ್ಮೆ ಕೇಳಿಯೇ ಬಿಟ್ಟೆ.

ಗುರುದೇವರೆಂದರು: "ನನಗೆ ಏನಾಗುತ್ತದೆ ಎಂಬುದನ್ನು ನಾನು ವಿವರವಾಗಿ ಹೇಳಲಾರೆ. ಯಾವಾಗ, ಯಾಕೆ ಇದು ಆಗುತ್ತದೆ ಎನ್ನುವುದೂ ನನಗೂ ತಿಳಿಯದು. ಒಮ್ಮೊಮ್ಮೆ ಅನಿರೀಕ್ಷಿತ ಗುಣುಗುಣು ಪ್ರಾರಂಭವಾಗಿಬಿಡುತ್ತದೆ. ಆಗ ದೂರ ಆಕಾಶದಲ್ಲಿ ಯಾರೋ ಹಾಡುತ್ತಿರುವಂತೆ ನನಗೆ ಭಾಸವಾಗುತ್ತದೆ.

ಏನು ಹಾಡುತ್ತಾರೋ ಅದು ನನಗೆ ಅರ್ಥವಾಗುವುದಿಲ್ಲ. ಅವರು ಹಾಡುತ್ತಿದ್ದರೆ, ನಾನು ಆ ಹಾಡುನ್ನು ಅನುಕರಿಸತೊಡಗುತ್ತೇನೆ.

ಅಷ್ಟೇ, ಕೈ ,ಕಾಲು, ತಲೆ ಅಲುಗಾಡಿಸುತ್ತೇನೆ. ಆಮೇಲೆ ಶಬ್ದಗಳು ಬರತೊಡಗುತ್ತವೆ. ಈ ಶಬ್ದಗಳಲ್ಲಿ ಆಮೇಲೆ ಸಾಹಿತ್ಯದೃಷ್ಟಿಯಿಂದ ಬದಲಾವಣೆ ಮಾಡುವ ಗೋಜಿಗೆ ಹೋಗುವುದಿಲ್ಲ ಪ್ರಭುವಿನ ದಾನವೆಂದೆಣಿಸಿ ಅದನ್ನು ಇದ್ದಕ್ಕಿದ್ದಂತೆ ಸ್ವೀಕರಿಸಿಬಿಡುತ್ತೇನೆ."

ಗುರುದೇವರ ಈ ಗುಣಗುಣಿಕೆಯ, ಕಾವ್ಯಾನುಭೂತಿಯ ರಹಸ್ಯವನ್ನು ಕೇಳಿ ದೇವರ ಮಹಿಮೆಯನ್ನು ಕುರಿತು ನಾನು ಸೋಜಿಗಪಟ್ಟೆ.

ಗುರುದೇವರ ತಂದೆಯವರು ಒಮ್ಮೆ ಪೂರ್ವ ಬಂಗಾಲದಲ್ಲಿನ ತಮ್ಮ ಜಮೀನ್ದಾರಿಯ ನಿರ್ವಹಣೆಗಾಗಿ ರವೀಂದ್ರರನ್ನು ಅಲ್ಲಿಗೆ ಕಳಿಸಿದ್ದರಂತೆ. ಆಗ ನಡೆದದ್ದನ್ನು ಅವರು ತಮ್ಮ ಮಿತ್ರರೊಬ್ಬರಿಗೆ ವಿವರಿಸಿದಾಗ ನಾನಲ್ಲಿದ್ದೆ. ಅದು ಹೀಗೆ :

"ನಾನು ಪೂರ್ವ ಬಂಗಾಲದಲ್ಲಿದ್ದಾಗ ಎಷ್ಟೋ ಸಲ ಎಷ್ಟೋ ದಿನಗಳವರೆಗೆ ನಾನು ಯಾರೊಡನೆಯೂ ಮಾತನ್ನೇ ಆಡುತ್ತಿರಲಿಲ್ಲ. ಮೌನದ ಈ ಮಂತ್ರಶಕ್ತಿಯಿಂದಲೇ ಆಗ ನನ್ನಿಂದ ಎಷ್ಟೋ ಉತ್ತಮ ಕವಿತೆಗಳೂ ಹೊರಬಂದವು." ರವೀಂದ್ರರ "ಗೀತಾಂಜಲಿ"ಯ ಗೀತೆಗಳೂ ಭಜನೆಗಳೂ ಉಪನಿಷತ್ ವಾಕ್ಯಗಳಂತೆ ತೋರುತ್ತವೆ. ಅವುಗಳ ಮೇಲೆ ತೈತ್ತಿರೀಯ, ಕಠ, ಈಶಾವಾಸ್ಯಾದಿ ಉಪನಿಷತ್ತುಗಳ ಮುದ್ರೆ ಕಾಣಿಸುತ್ತದೆ. ಈ ಬಗ್ಗೆ ಗುರುದೇವರು, "ನನ್ನ ತಂದೆಯವರು ಉಪನಿಷತ್ತುಗಳ ಸಜೀವ ವ್ಯಾಖ್ಯಾನದಂತಿದ್ದರು," ಎನ್ನುತ್ತಿದ್ದರು.

ಗುರುದೇವರು ಹಳ್ಳಿಯಲ್ಲಿದ್ದಾಗಿನ ಇನ್ನೊಂದು ಘಟನೆ: ಅವರಲ್ಲಿಗೆ ನಿತ್ಯ ಒಬ್ಬ ಪೋಸ್ಟಮನ್ ಬರುತ್ತಿದ್ದ. ಅವನ ಹೆಸರು 'ಗಗನ.' ಒಳ್ಳೇ ರಸಿಕ, ಗಾನಮತ್ತ.

ಒಂದು ದಿನ ಅವನು ಗುರುದೇವರ ಟಪಾಲನ್ನು ಬಾಗಿಲು ಕಾಯುವವನ ಹತ್ತಿರ ಕೊಟ್ಟು ಹಾಡುತ್ತಾ ಮುಂದೆ ಸಾಗುತ್ತಿದ್ದ. ಕಂಠ ಬಹಳ ಮಧುರವಾಗಿತ್ತು:

"ಆಮಾರ್ ಚಿಠ್ಠೀ ಆಶ್‌ಬೆ ಕಬೇ?

(ನನ್ನ ಪತ್ರ ಬರುವುದೆಂದು?)

ಗುರುದೇವರು ಈ ಶಬ್ದಗಳನ್ನು ಕೇಳಿದರು. ಮರುದಿನ ಅವನಿಂದ ಇಡೀ ಹಾಡು ಹೇಳಿಸಿದರು. ಕೇಳಿ ಅವರು ಮುಗ್ಧರಾಗಿಬಿಟ್ಟರು. ಅದನ್ನು ಅವರು ತಮ್ಮ ಧ್ಯಾನದ ಸೂತ್ರವನ್ನಾಗಿ ಮಾಡಿಕೊಂಡರು: "ನಾವು ಹುಟ್ಟುವಾಗಲೇ ನಮ್ಮ ವಿಳಾಸಕ್ಕೆ ಒಂದು ಪತ್ರವನ್ನು ಕಳಿಸಲಾಗುತ್ತದೆ. ಆ ಪತ್ರ ಯಾವ ಜನ್ಮದಲ್ಲಿ ನಮ್ಮ ಕೈಸೇರುವುದು?"

ಈ ಪ್ರಸಂಗದಿಂದಲೇ ಗುರುದೇವರ ಉತ್ಕೃಷ್ಟ ನಾಟಕವಾದ 'ಪೋಸ್ಟ್ ಆಫೀಸ್'ಗೆ ಪ್ರೇರಣೆ ಸಿಕ್ಕಿದ್ದು.

"ನನ್ನ ಸಾಹಿತ್ಯವನ್ನು ತಿಳಿದುಕೊಳ್ಳಬೇಕಾದರೆ ಮೊದಲು 'ಪೋಸ್ಟ್ ಆಫೀಸ್' ಓದಿರಿ. ನನ್ನ ಸಾಹಿತ್ಯದ ಉದ್ದೇಶ ಒಂದೇ–ಸಾಂತದೊಡನೆ ಅನಂತವನ್ನು, ಅನಂತದೊಡನೆ ಸಾಂತವನ್ನು ಸಂಧಾನ ಮಾಡುವುದು, ಎಂದೊಮ್ಮೆ ಗುರುದೇವರೇ ಹೇಳಿದರು.

ಆ ನಾಟಕದಲ್ಲಿ ಅವರು ಸಸೀಮದ ಮುಖದಿಂದ ಅಸೀಮದ ದರ್ಶನ ಮಾಡಿಸಿದ್ದಾರೆ. ಒಬ್ಬ ಹುಡುಗ, ಅವನಿಗೆ ಅಸ್ವಸ್ಥವಾಗುತ್ತದೆ. ಅವನ ಕೋಣೆಯ ಕಿಟಕಿಗಳನ್ನೆಲ್ಲಾ ಮುಚ್ಚಿರುತ್ತಾರೆ. ಹುಡುಗ ದಿನವೂ, ಒಂದು ಕಿಟಕಿಯನ್ನಾದರೂ, ಅರ್ಧವಾದರೂ ತೆರೆದಿಡಿರಿ, ಎಂದೂ ಹೇಳುತ್ತಾನೆ. ಒಂದು ಕಿಟಕಿಯನ್ನು ಅರ್ಧ ತೆರೆದಿಡುತ್ತಾರೆ. ಅದರ ಮೂಲಕ ಅವನು ದೂರದ ಬೆಟ್ಟಗಳನ್ನೂ ನಿಸರ್ಗವನ್ನೂ ಮನುಷ್ಯರನ್ನೂ ನೋಡುತ್ತಾನೆ. ದೂರದಲ್ಲಿ ಮೊಸರು ಮಾರುವವನು ಬರುತ್ತಾನೆ; ಅವನನ್ನು ನೋಡಿ ಮೊಸರು ಮಾರಲು ಕಲಿಯುತ್ತಾನೆ. ಹೀಗೆ ಪ್ರತಿ ಕೆಲಸದಲ್ಲಿಯೂ ಅವನಿಗೆ ಆಸಕ್ತಿ ಹುಟ್ಟುತ್ತದೆ. ಹೊಸ ಹೊಸ ವಿಷಯಗಳನ್ನು ಕಲಿತುಕೊಳ್ಳುತ್ತಾನೆ.

ಕೋಣೆಯಲ್ಲಿದ್ದವನು ಬಂಧಿತನಾಗಿರುತ್ತಾನೆ. ಅವನು ಏನನ್ನೂ ಪಡೆಯುವುದಿಲ್ಲ. ಬಾಗಿಲು ತೆರೆದಿಟ್ಟವನು ಸೀಮೆಯ ಆಚೆಗೆ ಅಸೀಮನನ್ನು ಕಾಣುತ್ತಾನೆ. ಅವನಿಗೆ 'ದರ್ಶನ'ವಾಗುತ್ತದೆ.

ಗುರುದೇವರು ನಿಧನ ಹೊಂದುವ ಕೆಲದಿನ ಮುಂಚೆ ಶಾಂತಿನಿಕೇತನದಲ್ಲಿ ಈ ನಾಟಕವನ್ನು ಆಡಿಸಿದರು. ನೋಡನೋಡುತ್ತಾ ಅವರು ಗುಣಗುಣಿಸಲಾರಂಭಿಸಿದರು. ಹಾಗೇ ಎದ್ದು ಹತ್ತಿರದ ಕೋಣೆಗೆ ಹೋಗಿ ಅವರು ಒಂದು ಗೀತವನ್ನು ಬರೆದರು: "ಸಮುಖ ಶಾಂತಿ ಪಾರಾವಾರ್."

ಮರುದಿನ ಶಾಂತದೇವಘೋಷರಿಗೆ ಅದನ್ನು ಕಲಿಸಿದರು. ಆಮೇಲೆ ಅದರ ಸ್ವರಪ್ರಸ್ತಾರವನ್ನು ಬರೆಯಿಸಿ, ಎಲ್ಲವನ್ನು ಒಂದು ಲಕೋಟೆಯಲ್ಲಿ ಹಾಕಿ ಬಂದುಮಾಡಿಸಿ, "ನಾನು ಸತ್ತ ದಿನ ಇದನ್ನು ತೆರೆಯಬೇಕು," ಎಂದು ಆಜ್ಞಾಪಿಸಿದರು.

ಆ ಗೀತದಲ್ಲಿ ಆ ಅನಂತ ಕರ್ಣಧಾರನನ್ನು ಕುರಿತು ಸ್ತೋತ್ಕಂಠವಾದ ಕೂಗು ಇದೆ. "ಓ ನನ್ನ ಹರಿಗೋಲ ಅಂಬಿಗಾ! ಇನ್ನೂ ಆಗಲಿಲ್ಲ ನಿನ್ನ ದರ್ಶನ. ಅದು ಎಂದು ಒದಗೀತು, ಎಂದು ದೊರಕೀತು? ಕರೆದೊಯ್ಯೋ ನನ್ನೀ ಹರಿಗೋಲ, ನಿನ್ನ ಆ ಶಾಂತಿಸಾಗರಕ್ಕೆ. ಕರೆದೊಯ್ದು ನಿನ್ನ ಆ ವಿರಾಟ್ ವಿಶ್ವದಲ್ಲಿ ನನ್ನನ್ನೊಂದಾಗಿಸಿಬಿಡಯ್ಯಾ."

ಸಾಭಾರ– ಕಸ್ತೂರಿ.ಲೇ: ಗುರುದಯಾಲ ಮಲ್ಲಿಕ

***

ಸೂಚನೆಂಯೇನೋ ಬಲವತ್ತರ, ಆದರೆ ಅದು ಬಡತನವನ್ನು ನಿವಾರಿಸಬಲ್ಲದೆ?

– ಸಂಜಯರೆಡ್ಡಿ ಮತ್ತು ಆಂಟೊನಿಹ್ಯೂಟಿ.

ಇತ್ತೀಚೆಗಷ್ಟೇ ಪ್ರೊ॥ ಜೆಫ್ರಿ ಸಾಚ್ಸ್ 'ಬಡತನದ ಮುಕ್ತಾಯ' ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಅವರು ಅದರಲ್ಲಿ ವಿಶ್ವದ ಬಡತನವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಶ್ರೀಮಂತ ಮತ್ತು ಬಡ ರಾಷ್ಟ್ರಗಳು ಸಹಭಾಗಿಗಳಾಗಬೇಕೆಂದು ನ್ಯಾಯೋಚಿತವಾಗಿಯೇ ಪ್ರತಿಪಾದಿಸಿದ್ದಾರೆ.

ಪ್ರೊ॥ಸಾಚ್ಸ್ ವಿಶ್ವರಾಷ್ಟ್ರಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೋಫಿಅನ್ನಾನ್‌ರವರಿಗೆ ಸಲಹಾಕಾರರಾಗಿದ್ದಾರೆ. ಸಾಚ್ಸ್ ತಮ್ಮ ಪುಸ್ತಕದಲ್ಲಿ ಬಡತನ ನಿರ್ಮೂಲನಕ್ಕಾಗಿ ಕೈಗೊಳ್ಳಬೇಕಾದ ಕೆಲವು ಪ್ರಯತ್ನಗಳನ್ನು ಸೂಚಿಸಿದ್ದಾರೆ. ಅವುಗಳಲ್ಲಿ ಆರೋಗ್ಯ, ಶಿಕ್ಷಣ, ಮತ್ತು ಮೂಲಭೂತ ಸೌಕರ್ಯಗಳಂಥ ಕ್ಷೇತ್ರಗಳಲ್ಲಿ ನಿರ್ದಿಷ್ಟವಾದ ಬಂಡವಾಳ ಹೂಡುವಿಕೆಯ ಮೂಲಕ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿಯ ಬಡತನವನ್ನು ಬಹಳಷ್ಟು ಪ್ರಮಾಣದಲ್ಲಿ ಕಡಿಮೆ ಮಾಡಬಹುದೆಂದು ಸೂಚಿಸಿದ್ದಾರೆ. ಜೊತೆಗೆ ಬಂಡವಾಳ ಹೂಡಿಕೆಯ ಪ್ರಯತ್ನವನ್ನು ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ಅನುಷ್ಠಾನ ಗೊಳಿಸಬೇಕೆಂದೂ ಸೂಚಿಸಿದ್ದಾರೆ. ಅಲ್ಲದೆ, ಅಭಿವೃದ್ಧಿಹೊಂದಿದ ರಾಷ್ಟ್ರಗಳು ತಮ್ಮ ಇಂದಿನ ವಾರ್ಷಿಕ ೬೫ ಬಿಲಿಯನ್ ಡಾಲರ್‌ಗಳಷ್ಟಿರುವ ಸಹಾಯಧನವನ್ನು ಹೆಚ್ಚಿಸಬೇಕೆಂದೂ ಹೇಳಿದ್ದಾರೆ. ಭಾರತಕ್ಕೇನೋ ವಿಶ್ವದ ಇತರ ದೇಶಗಳಿಗಿಂತ ವಿದೇಶಿ ಸಹಾಯವು ಕಡಿಮೆ ಮಹತ್ವದ್ದಾಗಿರಬಹುದು. ಆದರೆ ಸಬ್‌ಸಹರಾದಂಥ ಕಡಿಮೆ ಆಂತರಿಕ ಸಂಪನ್ಮೂಲಗಳಿರುವಂಥ ದೇಶಗಳಿಗೆ ಹೊರ ದೇಶಗಳ ಸಹಾಯವು ಬಹಳ ಮಹತ್ವದ್ದಾಗಿರುತ್ತದೆ. ಈ ದೇಶಗಳ ಅಭಿವೃದ್ಧಿಯಲ್ಲಿ ಸಹಾಯವು ಯಾವ ರೀತಿ ಮಹತ್ವದ ಪಾತ್ರವನ್ನು ವಹಿಸುತ್ತದೆಂಬುದನ್ನು ಸಾಚ್ಸ್ ವಿವರಿಸಿದ್ದಾರೆ. ಸಾಚ್ಸ್ ಸೂಚಿಸಿರುವ ಶಿಫಾರಸ್ಸುಗಳು ಬಹಳ ಮಹತ್ವದ್ದಾಗಿದೆ. ಏಕೆಂದರೆ ಈ ವರ್ಷ ಪ್ರಪಂಚದ ರಾಷ್ಟ್ರಗಳ ಪ್ರಮುಖರೆಲ್ಲರೂ ಸೇರಿ ವಿಶ್ವರಾಷ್ಟ್ರಸಂಸ್ಥೆ ಈ ಶತಮಾನಕ್ಕಾಗಿ ಗೊತ್ತು ಮಾಡಿರುವ ಅಭಿವೃದ್ಧಿಯ ಗುರಿಗಳನ್ನು ಹೇಗೆ ಅತ್ಯುತ್ತಮವಾಗಿ ಸಾಧಿಸಬಹುದೆಂಬುದರ ಬಗ್ಗೆ ಸಮಾಲೋಚನಾ ಸಭೆ ನಡೆಸಿದ್ದಾರೆ. ಪ್ರೊ॥ಸಾಚ್ಸ್‌ರವರು ಈ ಸಂದರ್ಭಕ್ಕೆ ಅಗತ್ಯವಾಗಿರುವಂಥ ಸ್ಪಷ್ಟ ಮತ್ತು ಬಲವತ್ತರ ಸೂಚನೆಗಳನ್ನು ಪ್ರಸ್ತಾಪಿಸಿದ್ದಾರೆ. ಆದರೆ ಈ ಸೂಚನೆ ಅಥವಾ ಶಿಫಾರಸ್ಸುಗಳು ದೀರ್ಘಕಾಲದವರೆಗೆ ಉತ್ತಮವಾಗಿ ಬಾಳಬಲ್ಲಂಥ ವಿಶ್ವವನ್ನು ನಿರ್ಮಿಸಲು ನಿಜವಾಗಿಯೂ ಸಹಾಯಕವಾಗಬಲ್ಲವೇ ಎಂಬುನು ಪ್ರಶ್ನಾರ್ಹವಾಗಿದೆ. ಸಾಚ್ಸ್‌ರವರು ಸೂಚಿಸಿರುವ ಸಲಹೆಗಳಲ್ಲಿಯೆ ಎರಡು ಪ್ರಮುಖ ಸಮಸ್ಯೆಗಳಿವೆ.

ಮೊದಲನೆಯ ಸಮಸ್ಯೆ: ಉದಾರಿಕರಣ ಮತ್ತು ಖಾಸಗಿಕರಣದಂಥ ಪರಂಪರಾಗತ ಪದ್ಧತಿಗಳನುಸಾರವಾಗಿ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವೇ ಎಂದು ಪ್ರಶ್ನಿಸಲು ಅವರು ವಿಫಲರಾಗಿದ್ದಾರೆ. ಆದರೂ ಸಹ ಸಾರ್ವಜನಿಕ ಆರೋಗ್ಯ, ಶಿಕ್ಷಣ, ಮೂಲಭೂತ ಸೌಕರ್ಯಗಳಂಥ ಕ್ಷೇತ್ರಗಳಲ್ಲಿ ಸರ್ಕಾರದ ನೇರ ಬಂಡವಾಳ ಹೂಡಿಕೆಯನ್ನು ಸಮರ್ಥಿಸುತ್ತಾರೆ. ಆದರೆ ಅವರ ಆ ಪರಂಪರಾಗತ ನೆರವಿನ ಸಲಹೆಯು ಪ್ರಾಶ್ನಾರ್ಹವಾಗಿಯೇ ಉಳಿಯುತ್ತದೆ. ಈ ಸಂದರ್ಭದಲ್ಲಿ ಪ್ರೊ॥ ಸಾಚ್ಸ್ ಪ್ರತಿಪಾದಿಸಿರುವ ಸಿದ್ಧಾಂತವನ್ನು "ವಾಷಿಂಗ್‌ಟನ್ ಕಾನ್‌ಸೆಸ್–ಪ್ಲಸ್" ಎಂದು ಕರೆಯಬಹುದು. ಈ ಸಿದ್ಧಾಂತವು ಕಳೆದ ಎರಡು ದಶಕಗಳಿಂದ ಅಮೇರಿಕಾ ಸರ್ಕಾರ, ಅಂತಾರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕ್ ಇತ್ಯಾದಿಗಳು ರೂಪಿಸಿದ್ದ ನೀತಿಗಳಲ್ಲಿಯ ಎಲ್ಲ ಅಂಶಗಳ ಜೊತೆಗೆ ಇನ್ನೂ ಹಲವಾರು ಇತರ ಅಂಶಗಳನ್ನು ಒಳಗೊಂಡಿರುತ್ತದೆ.

"ವಾಷಿಂಗ್‌ಟನ್ ಕಾನಸೆಸ್–ಪ್ಲಸ್" ಸಿದ್ಧಾಂತದ ಟೀಕಾಕಾರರಾದ ನೊಬೆಲ್ ಪ್ರಶಸ್ತಿ ವಿಜೇತರಾಗಿರುವ ಸ್ಟಿಗ್ಲಿಟ್ಸ್ (Stiglistz) ಅಥವಾ ಜಗದೀಶ್ ಭಗವತಿ ಮುಂತಾದವರು ಹೊಂದಿರುವ ಅಭಿಪ್ರಾಯ ಪ್ರೊ॥ಸಾಚ್ಸ್‌ರವರ ಅಭಿಪ್ರಾಯಕ್ಕಿಂತ ಬಹುವಾಗಿ ಭಿನ್ನವಾಗಿರುತ್ತದೆ.

ಪ್ರೊ॥ಭಗವತಿಯವರು ಮುಕ್ತ ಬಂಡವಾಳ ಹೂಡಿಕೆಯ ಅಪಾಯವನ್ನು ಸ್ಪಷ್ಟವಾಗಿ ಎತ್ತಿ ತೋರಿಸಿದ್ದಾರೆ.

ಪ್ರೊ॥ಸಾಚ್ಸ್‌ರವರು ಕೊಟ್ಟಿರುವ ಸಲಹೆಗಳು ವಿಶ್ವದ ಬಡತನ ನಿರ್ಮೂಲನೆಯ ಮಾರ್ಗದಲ್ಲಿಯ ಕೆಲ ಸಮಸ್ಯೆಗಳನ್ನು ಬಗೆ ಹರಿಸಲು ಸಮರ್ಥವಾಗಬಹುದಾದರೂ ಜೊತೆಯಲ್ಲಿಯೇ ಕೆಲ ಹೊಸ ಸಮಸ್ಯೆಗಳನ್ನೂ ಉಂಟುಮಾಡಬಹುದು!

ಪ್ರೊ॥ಸಾಚ್ಸ್‌ರವರ ಶಿಫಾರಸ್‌ನಲ್ಲಿಯ ಎರಡನೆಯ ಸಮಸ್ಯೆಯೇನೆಂದರೆ ಇಂದಿನ ಅಭಿವೃದ್ಧಿ ಮಾರ್ಗದಲ್ಲಿಯ ತೊಡಕುಗಳ ನಿವಾರಣೆಗೆ ತನ್ನದೆ ಆದ ತಾಂತ್ರಿಕ ನಿರ್ಬಂಧಗಳಿವೆ ಎಂಬ ಕಲ್ಪನೆಯ ಮೇಲೆ ಸಾಚ್ಸ್ ಬಹಳಷ್ಟು ಅವಲಂಬಿತರಾಗಿದ್ದಾರೆ. ಆದರೆ ಯಾವುದೇ ಒಂದು ಗುರಿಯನ್ನು ಮುಟ್ಟುವುದು ಹೇಗೆ ಎಂಬುದನ್ನು ಕಾರ್ಯ ಕೈಗೊಳ್ಳುವ ಮೊದಲೇ ತಿಳಿದುಕೊಳ್ಳುವುದು ಅಸಾಧ್ಯವಾದ ಮಾತು. ಇದಕ್ಕೆ ಉದಾಹರಣೆಯಾಗಿ ಸಮಗ್ರ ಕೇಂದ್ರಿತ ಯೋಜನೆಗಳು ಹೇಗೆ ಅತಿಶಯವಾಗಿ ವಿಫಲವಾದವೆಂಬುದು ಸ್ಪಷ್ಟವಾಗಿಯೇ ಇದೆ.

ಪ್ರೊ॥ಸಾಚ್ಸ್ ಹೇಳುವಂತೆ ಕೀಟನಾಶಕ ದ್ರವದಲ್ಲಿ ಅದ್ದಲ್ಪಟ್ಟ ಸೊಳ್ಳೆ ಪರದೆಗಳು ಮಲೇರಿಯಾವನ್ನು ಎದುರಿಸುವ ಮೂಲಕ ಜನರ ಆರೋಗ್ಯವನ್ನು ಹೆಚ್ಚಿಸುವುದರಲ್ಲಿ ಬಹಳ ಪರಿಣಾಮಕಾರಿಯಾಗಿದ್ದಿರ ಬಹುದಾದರೂ ಇನ್ನುಳಿದಿರುವ ಇತರೆ ದೊಡ್ಡ ಸಮಸ್ಯೆಗಳಿಗೆ ಪರಿಹಾರಗಳಾವುವು ಎಂದು ಇದುವರೆಗೂ ತಿಳಿದು ಬಂದಿಲ್ಲ. ಕೇಂದ್ರಿತ ಯೋಜನೆಗಳ ಈ ಮಿತಿಯನ್ನು ಅರ್ಥ ಮಾಡಿಕೊಳ್ಳುವುದು ಶ್ರೇಯಸ್ಕರ.

ವಿಶ್ವದ ಅಭಿವೃದ್ಧಿಶೀಲ ದೇಶಗಳು ಎದುರಿಸುತ್ತಿರುವ ಅತಿ ಮಹತ್ವದ ಸಮಸ್ಯೆಗಳ ಪರಿಹಾರಕ್ಕೆ ಸಾಚ್ಸ್ ಭಾವಿಸಿರುವಂತೆ ತಾಂತ್ರಿಕ ಅಡೆತಡೆಗಳೇನಿಲ್ಲ.

ಇಂಥ ಸಮಸ್ಯೆಗಳಿಗೆ ಸಾಂಸ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿಯ ಸುಧಾರಣೆಗಳು ಪರಿಹಾರವಾಗಬಲ್ಲವು. ಇವು ಮಹತ್ವದ್ದಾಗಿದ್ದರೂ ಸಹ ಸಾಚ್ಸ್ ತಾವು ಕೊಟ್ಟ ಸಲಹೆಗಳಲ್ಲಿ ಇವುಗಳನ್ನು ಉದಾಸೀನಮಾಡಿದ್ದಾರೆ.

ಯಾವದೇ ದೇಶದ ರಾಷ್ಟ್ರೀಯ ಅಭಿವೃದ್ಧಿಯೋಜನೆ ಇರಲಿ ಆ ಯೋಜನೆಯ ಅನುಷ್ಠಾನದ ಕಾರ್ಯತಂತ್ರವು ಪುನರ್ ಪರಿಶೀಲನೆಗೆ ಒಳಗಾಗುತ್ತಿರಬೇಕಾದುದು ಅಗತ್ಯ. ಹೊಸ -ಹೊಸ ಮಾಹಿತಿಗಳು ದೊರೆಯುತ್ತಿರುವ ಬೆಳಕಿನಲ್ಲಿ ಒಬ್ಬ ವ್ಯಕ್ತಿಯ ಹಾಗೆಯೇ ಒಂದು ದೇಶವೂ ಕೂಡ ತನ್ನ ಕಾರ್ಯಯೋಜನೆಗಳನ್ನು ಪರಿಶೀಲಿಸಿದರೆ ಹೆಚ್ಚು ಪ್ರಯೋಜನಕಾರಿ.

ಬಡತನವನ್ನು ಕಡಿಮೆ ಮಾಡುವ ದೃಷ್ಟಿಯಿಂದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳು ಹೆಚ್ಚು ಸಡಿಲವಾಗಿರಬೇಕಾಗುತ್ತದೆ. ಆಗ ಬೇರೆ-ಬೇರೆ ದೇಶಗಳಲ್ಲಿರುವ ಬೇರೆ-ಬೇರೆ ಪ್ರಕಾರದ ಪರಿಸ್ಥಿತಿಗಳನ್ನು, ಸಮಸ್ಯೆಗಳನ್ನು ಪ್ರತಿಬಿಂಬಿಸಬಲ್ಲವು. ಆದರೆ ಯೋಜನೆಗಳಲ್ಲಿ ಸಡಿಲತೆಯೊಂದಿದ್ದರೆ ಸಾಲದು, ಸಮಾಜದಲ್ಲಿಯ ಬಡತನವನ್ನು ನಿವಾರಿಸುವುದಕ್ಕೆ ವ್ಯವಹಾರಿಕ ಮಾರ್ಗವನ್ನು ಕಂಡುಕೊಳ್ಳಲೂ ಸಾಧ್ಯವಾಗುವಂತಿರಬೇಕು; ಈ ಮಾರ್ಗಗಳಲ್ಲಿ ಹೊಸ ಕಾರ್ಯತಂತ್ರಗಳೂ ದೊರೆಯುವಂತಾಗಬೇಕು. ಬಡತನದ ನಿವಾರಣೆಗೆ ಈ ಕಾರ್ಯತಂತ್ರಗಳು ನಮಗೆ ಈ ಮೊದಲೆ ಗೊತ್ತಿದ್ದವೆನ್ನುವಂಥ ಭ್ರಮೆ ಇರಕೂಡದು. ಏಕೆಂದರೆ ಕಾಲ ಕಳೆದಂತೆಲ್ಲ, ಅನುಭವ ಕೂಡಿಬಂದಂತೆಲ್ಲ ಇನ್ನೂ ಅತ್ಯುತ್ತಮವಾದ ಅಭಿವೃದ್ಧಿ ಕಾರ್ಯತಂತ್ರಗಳು ಗೋಚರಿಸಬಹುದು, ಮಾನವರು ತಮ್ಮ ಸ್ವಂತ ಮತ್ತು ಇತರರ ಪ್ರತ್ಯಕ್ಷ ಪ್ರಯೋಗಗಳ ಅನುಭವಗಳಿಂದ ಕಲಿಯುತ್ತಾ ಹೋಗುತ್ತಿರುತ್ತಾರೆ. ಬಡತನವನ್ನು ಕಡಿಮೆ ಮಾಡುವ ಬಗ್ಗೆ ಇರಬಹುದಾದ ಉತ್ತಮ ಕಾರ್ಯತಂತ್ರವು ವಿಶ್ವದ ವಿವಿಧ ದೇಶಗಳು ತಮ್ಮ-ತಮ್ಮ ದೇಶಗಳಲ್ಲಿಯು ಬಡತನವನ್ನು ಕಡಿಮೆ ಮಾಡುವ ದಿಕ್ಕಿನಲ್ಲಿ ಪ್ರಯೋಗಯೋಗ್ಯವಾಗಿರಬೇಕಲ್ಲದೆ ಒಂದು ದೇಶದ ಕಾರ್ಯಾನುಭವದಿಂದ ಇನ್ನೊಂದು ದೇಶವು ಕಲಿಯುವುದಕ್ಕೆ ಯೋಗ್ಯವಾಗಿರಬೇಕು. ಇದಕ್ಕೆ ಒಂದು ಉದಾಹರಣೆಯನ್ನಾಗಿ ಅಭಿವೃದ್ಧಿಶೀಲ ದೇಶಗಳಲ್ಲಿಯ ಶಾಲೆಗಳಲ್ಲಿರುವ ಮಧ್ಯಾಹ್ನ ಊಟದ ಕಾರ್ಯಕ್ರಮವನ್ನು ಎತ್ತಿಕೊಳ್ಳಬಹುದು. ಈ ಉದಾಹರಣೆ ದೇಶಗಳು ಪರಸ್ಪರರ ಕಲಿಯುವಿಕೆ, ಅನುಭವದ ಹಂಚಿಕೊಳ್ಳುವಿಕೆಯಿಂದ ಹೇಗೆ ಉತ್ತಮಕಾರ್ಯತಂತ್ರವನ್ನು ರೂಪಿಸಿಕೊಳ್ಳಬಹುದೆಂಬುದನ್ನು ತೋರಿಸುತ್ತದೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಮಧ್ಯಾಹ್ನ ಊಟದ ಕಾರ್ಯಕ್ರಮವನ್ನು ೧೯೮೦ರ ದಶಕಗಳ ಪ್ರಾರಂಭದಲ್ಲಿ ಕೈಗೊಳ್ಳಲಾಯಿತು. ಈ ಯೋಜನೆ ಪ್ರಾರಂಭವಾದಾಗ ಜನಮಾನಸವನ್ನು ಸಂತೋಷಗೊಳಿಸುವುದಕ್ಕೆ ಮಾತ್ರ ಇದನ್ನು ಪ್ರಾರಂಭಿಸಲಾಗಿದೆ; ಈ ಯೋಜನೆಯು ಬಡತನವನ್ನು ಕಡಿಮೆ ಮಾಡುವಲ್ಲಿ ಅಂಥ ಪರಿಣಾಮಕಾರಿಯಾದುದಲ್ಲವೆಂದು ಟೀಕಿಸಲಾಗಿತ್ತು. ಅಷ್ಟೇ ಅಲ್ಲ ಅನೇಕ ಭಾರತೀಯ ಅರ್ಥಶಾಸ್ತ್ರಜ್ಞರು ಈ ಮಧ್ಯಾಹ್ನದ ಊಟದಿಂದ ಮಗುವಿಗೆ ಪೌಷ್ಠಿಕ ಆಹಾರ ಸಿಗದೇ ಇರುವ ಸಂಭವವಿದೆ ಎಂಬ ಭೀತಿಯನ್ನು ವ್ಯಕ್ತಪಡಿಸಿದ್ದರು. ಏಕೆಂದರೆ ಮಕ್ಕಳ ಬಡ ತಂದೆ-ತಾಯಂದಿರು, ಮಧ್ಯಾಹ್ನ ಊಟದ

ಯೋಜನೆಯಿಂದ ತಮ್ಮ ಮಕ್ಕಳಿಗೆ ಪೌಷ್ಟಿಕ ಆಹಾರ ದೊರೆಯುತ್ತಿರುವುದರಿಂದ ಈಗ ಅದಕ್ಕಾಗಿ ತಾವು ಖರ್ಚು ಮಾಡಬೇಕಾಗಿಲ್ಲವೆಂದು, ಅವರು ಈ ಮೊದಲು ತಮ್ಮ ಮಕ್ಕಳ ಪೌಷ್ಟಿಕ ಆಹಾರಕ್ಕಾಗಿ ಖರ್ಚು ಮಾಡುತ್ತಿದ್ದುದನ್ನು ಇನ್ನೂ ಕಡಿಮೆ ಮಾಡುವ ಸಂಭವವಿತ್ತು. ಮಧ್ಯಾಹ್ನ ಊಟದಂಥ ಯೋಜನೆಗಳು ಅಭಿವೃದ್ಧಿಯ ನಿಜವಾದ ಪರಿಣಾಮಕಾರಿ ಮಾಧ್ಯಮವಾಗಿಲ್ಲವೆಂಬುದರ ಬಗ್ಗೆ ಬಹಳ ಕಡಿಮೆ ಜನ ವಿಮರ್ಶಕರು ಮುಂಗಾಣಬಲ್ಲವರಾಗಿದ್ದರು. ಆದರೆ ವಾಸ್ತವವಾಗಿ ಈ ಯೋಜನೆಗಳು ಹಿಂದೆಂದಿಗಿಂತ ಹೆಚ್ಚಾಗಿ ಈಗ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪೋಷಕರನ್ನು ಉತ್ತೇಜಿಸಿದವು. ಯೋಜನೆಯ ಈ ಯಶಸ್ಸಿನಿಂದ ಪಾಠ ಕಲಿತ ಕೇಂದ್ರ ಸರ್ಕಾರವು ಈ ಯೋಜನೆಯನ್ನು ಎಲ್ಲ ರಾಜ್ಯಗಳು ಕೈಗೆತ್ತಿಕೊಳ್ಳುವುದಕ್ಕೆ ಪ್ರೋತ್ಸಾಹಿಸಲು ಅನೇಕ ಬಗೆಯ ರಿಯಾಯಿತಿಗಳನ್ನು ಜಾರಿಗೆ ತಂದಿತು. ಕೇಂದ್ರ ಸರಕಾರದ ಈ ಪ್ರಯತ್ನಕ್ಕೆ ಬೆಂಬಲ ಕೊಡುವ ರೀತಿಯಲ್ಲಿ ರಾಷ್ಟ್ರದ ಉಚ್ಚ ನ್ಯಾಯಾಲಯವು ಈ ಯೋಜನೆಯನ್ನು ಎಲ್ಲಾ ರಾಜ್ಯಗಳು ಜಾರಿಗೊಳಿಸುವಂತೆ ಶಾಸಕೀಯವಾಗಿ ಕಡ್ಡಾಯಗೊಳಿಸಿತು. ಇದಕ್ಕೆ ಕಾರಣವಿಲ್ಲದೇ ಇರಲಿಲ್ಲ. ಭಾರತದ ಎಲ್ಲ ರಾಜ್ಯಗಳು ಪ್ರಯೋಗಾಲಯಗಳಂತಿವೆ. ಆದ್ದರಿಂದ ಅವು ತಮ್ಮ-ತಮ್ಮ ಅನುಭವಗಳನ್ನು ಪರಸ್ಪರ ಹಂಚಿಕೊಂಡು ಕಲಿಯುವಂತೆ ಪ್ರೋತ್ಸಾಹಿಸಲು ಯೋಗ್ಯವಾಗಿವೆಯೆಂದು ಉಚ್ಚನ್ಯಾಯಾಲಯ ಸರಿಯಾಗಿಯೇ ಅರ್ಥ ಮಾಡಿಕೊಂಡಿತು.

ಭಾರತದ ಅನುಭವವು ಇನ್ನೂ ಅನೇಕ ಹೊಸ ಪ್ರಯೋಗಗಳಿಗೆ ನಾಂದಿಯನ್ನು ಹಾಡಿದೆ. ಭಾರತದ ಈ ಅನುಭವಗಳಿಂದ ಇತರ ಅಭಿವೃದ್ಧಿಶೀಲ ದೇಶಗಳು ಬಹಳಷ್ಟು ಕಲಿತಿವೆ. ಅಭಿವೃದ್ಧಿಗಾಗಿ ಪ್ರಯತ್ನ ಮತ್ತು ಅದಕ್ಕಾಗಿ ಅವಶ್ಯಕವಾದ ಸಾಂಸ್ಥಿಕ ಸುಧಾರಣೆ ಇವು ಈಗ ಪ್ರಪಂಚದಾದ್ಯಂತ ಎಲ್ಲ ದೇಶಗಳ ಗಮನದ ಕೇಂದ್ರಬಿಂದುವಾಗಿದೆ.

ಈ ಅನುಭವಗಳಲ್ಲಿ ಜಲಾಂಶದ ಕೊರತೆಯಿಂದ ಮಕ್ಕಳಲ್ಲಿ ಉಂಟಾಗುವ ಬಳಲಿಕೆಯನ್ನು ಬಾಯಿ ಮೂಲಕ ಜಲಾಂಶವನ್ನು ಹೇಗೆ ಹೆಚ್ಚಿಸಬೇಕೆಂಬುದರ ಬಗ್ಗೆ ಶಿಕ್ಷಣ ಕೊಡುವುದು, ಡಯೇರಿಯಾದಿಂದ ಆಗುವ ಮಕ್ಕಳ ಸಾವಿನ ಪ್ರಮಾಣವನ್ನು ಕಡಿಮೆ ಮಾಡುವುದು, ರಾಜ್ಯ ಸರ್ಕಾರ ಮತ್ತು ಸ್ಥಾನೀಯ ಸರ್ಕಾರಗಳ ಜವಾಬ್ದಾರಿ ಹೆಚ್ಚುವಂತೆ ಮಾಡುವುದು, ಜನತೆಗೆ ಮಾಹಿತಿ ಹಕ್ಕನ್ನು ಒದಗಿಸುವುದು ಇತ್ಯಾದಿ ಕ್ರಮಗಳೆಲ್ಲವು ಅಂತಿಮವಾಗಿ ಇಂಥ ಯೋಜನೆಗಳ ಅನುಭವದಿಂದ ಪರಸ್ಪರ ಕಲಿತ ಪಾಠಗಳ ಫಲವೇ ಆಗಿವೆ.

ವಿಶ್ವವು ಬಡತನವನ್ನು ಹೇಗೆ ಕಡಿಮೆ ಮಾಡಿಕೊಳ್ಳಬಹುದು; ಈ ದಿಸೆಯಲ್ಲಿ ಯಾವುದೇ ಪ್ರಯೋಗವನ್ನು ಕೈಗೊಂಡರೂ ಅದು ಎಲ್ಲ ದೇಶಗಳ ಅಭಿವೃದ್ಧಿಗೆ ಅಗತ್ಯವಿರುವ ಸಂಪನ್ಮೂಲಗಳನ್ನು ಕ್ರೋಢಿಸಿಕೊಳ್ಳಬಲ್ಲ ಸಾಮರ್ಥ್ಯವನ್ನು ಕೊಡುವ ಭರವಸೆ ಹೊಂದಿರಬೇಕು. ಜೊತೆಗೆ, ಪ್ರಯೋಗ ನಡೆಸುವುದಕ್ಕೂ, ಪಾಠ ಕಲಿಯುವುದಕ್ಕೂ ಅವಕಾಶವನ್ನೊದಗಿಸಬೇಕು. ಈ ಸಂದರ್ಭದಲ್ಲಿ "ನಾಯಕತ್ವ ಮತ್ತು ಸಹಭಾಗಿತ್ವ" ಎಂಬ ಪದ್ಧತಿ ಹೆಚ್ಚು ವಾಸ್ತವಿಕವಾದ ಪ್ರಯತ್ನವಾಗಿ ಒದಗಿಬರಬಹುದು. ಮೂರು ವರ್ಷಗಳಿಗೊಮ್ಮೆ ದೇಶಗಳು ಸ್ವಯಂ ಪ್ರೇರಿತವಾಗಿ

ಬಡತನ ಕಡಿಮೆ ಮಾಡಿಕೊಳ್ಳುವ ತಮ್ಮ ಯೋಜನೆಗಳನ್ನು ತಮ್ಮ ದೇಶದ ನಾಯಕರಿಗೆ ಪುನಾವಿಮರ್ಶೆಗಾಗಿ ಸಲ್ಲಿಸಬೇಕು ಹಾಗೆಯೇ ಸಮಾನ ಅನುಭವವುಳ್ಳ ದೇಶಗಳ ವಿಮರ್ಶೆಗೂ ಸಲ್ಲಿಸಬೇಕು.

"ನಾಯಕತ್ವ ಮತ್ತು ಭಾಗಿತ್ವ" ವಿಮರ್ಶಾಸಮಿತಿಯ ವಿಮರ್ಶೆ ಮತ್ತು ಶಿಫಾರಸ್ಸುಗಳು ಆಯಾ ದೇಶದಲ್ಲಿಯೂ ಮತ್ತು ಹೊರಗೂ ವ್ಯಾಪಕವಾಗಿ ಪ್ರಚುರಗೊಳ್ಳಬೇಕು. ಹಾಗಾದಾಗ ಸಾರ್ವಜನಿಕ ಶಿಕ್ಷಣಕ್ಕೆ ಮತ್ತು ಚರ್ಚೆಗೆ ಇಂಬುಕೊಟ್ಟಂತಾಗುತ್ತದೆ. ಒಂದು ಬಡದೇಶದ ಅಗತ್ಯ ಮತ್ತು ಬೇಡಿಕೆಗಳೇನು ಎಂಬುದನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ಮತ್ತು ಆ ದೇಶದ ಬಡತನವನ್ನು ಕಡಿಮೆ ಮಡುವುದಕ್ಕಾಗಿ ಇಟ್ಟುಕೊಂಡಿರುವ ಗುರಿಗಳನ್ನು ಸಾಧಿಸಲು ಇರಬಹುದಾದ ಕೊರತೆಗಳನ್ನು ತಿಳಿಯುವುದಕ್ಕಾಗಿ ಒಂದು ಅಳತೆಗೋಲೆಂದು, ಆ ದೇಶ ಹೊಂದಿರುವ ಸಂಪನ್ಮೂಲಗಳ ಪ್ರಮಾಣ ಮತ್ತು ಅವುಗಳನ್ನು ಬಳಸಿಕೊಳ್ಳಲು ಆ ದೇಶ ಹೊಂದಿರುವ ಸಾಮರ್ಥ್ಯ ಇತ್ಯಾದಿಗಳೆಲ್ಲವನ್ನು ಗುರ್ತಿಸಬೇಕು. ಆನಂತರ ಕಂಡು ಬರುವ ವಾಸ್ತವಿಕ ಕೊರತೆಯನ್ನು ಅಂತಾರಾಷ್ಟ್ರೀಯ ಸಹಾಯದ ಮೂಲಕ ಭರಿಸಬೇಕು. "ನಾಯಕತ್ವ ಮತ್ತು ಭಾಗಿತ್ವ"ದ ವಿಮರ್ಶಾ ನೀತಿಯು ಸ್ವಯಂಪ್ರೇರಿತವಾಗಿರಬೇಕು. ವಿಶಿಷ್ಟ ಪರಿಸ್ಥಿತಿ ಹೊಂದಿರುವ ಭಾರತದಂಥ ದೊಡ್ಡ ದೇಶಗಳಿಗೆ ಸ್ವಲ್ಪ ಪ್ರಮಾಣದ ವಿದೇಶಿ ಸಹಾಯ ಬೇಕಾಗಬಹುದು. ಶ್ರೀಮಂತ ದೇಶಗಳು ಚಿಕ್ಕ ಮತ್ತು ಬಡದೇಶಗಳ ಅಭಿವೃದ್ಧಿಯಲ್ಲಿ ಭಾಗಿಗಳಾಗಲು ಇಷ್ಟಪಡದೆ ಇರಬಹುದು. ಏಕೆಂದರೆ ಆ ಸಹಭಾಗಿತ್ವ ಶ್ರೀಮಂತ ರಾಷ್ಟ್ರಗಳಿಗೆ ಆಕರ್ಷಕವೆನಿಸದೆ ಇರಬಹುದು. ಆದರೂ ಕೂಡ "ನಾಯಕತ್ವ ಮತ್ತು ಭಾಗಿತ್ವ"ದ ಮಾರ್ಗವು ಅಭಿವೃದ್ಧಿ ಕ್ಷೇತ್ರದಲ್ಲಿ ಹೊಸ ಪ್ರಯೋಗಗಳನ್ನು ಮತ್ತು ಕಲಿಕೆಯನ್ನು ಉತ್ತೇಜಿಸುವುದಲ್ಲದೆ ಶ್ರೀಮಂತ ರಾಷ್ಟ್ರವು ಬಡರಾಷ್ಟ್ರಕ್ಕೆ ಸಹಾಯಧನವನ್ನು ನೀಡುವಾಗ ಕಠಿಣತಮವಾದ ಕರಾರುಗಳನ್ನು ಹಾಕುವುದನ್ನು ತಪ್ಪಿಸುತ್ತದೆ. ಅಲ್ಲದೆ ರಾಷ್ಟ್ರ-ರಾಷ್ಟ್ರಗಳಲ್ಲಿ ಪರಸ್ಪರ ಗೌರವ ಮತ್ತು ಬಾಧ್ಯತೆಯನ್ನು ಹೆಚ್ಚಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ "ಎಲ್ಲರಿಗೂ ಒಂದೇ ಅಳತೆಯ ಅಂಗಿ" ಎಂಬ ನೀತಿಯನ್ನು ಸಾರಸಗಟಾಗಿ ತಿರಸ್ಕರಿಸುತ್ತದೆ. ಬದಲಿಗೆ ಸ್ಥಳೀಯವಾಗಿಯೆ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ಮನೋಭಾವವನ್ನು ಪ್ರೋತ್ಸಾಹಿಸುತ್ತದೆ.

ಪ್ರೊ॥ಸಾಚ್ಸ್ ಹೇಳಿರುವಂತೆ ಶ್ರೀಮಂತ ದೇಶಗಳು ಬಡದೇಶಗಳಿಗೆ ಅಭಿವೃದ್ಧಿಗಾಗಿ ತಮ್ಮ ಬದ್ಧತೆಯನ್ನು ತೋರಿಸಬೇಕೆಂಬ ಮಾತು ಸರಿಯಾದುದೆ ಆಗಿದೆ. ಆದರೆ ವಿಶ್ವದಲ್ಲಿಯ ಬಡತನವನ್ನು ಕಡಿಮೆ ಮಾಡಲು ಈಗಾಗಲೆ ತಿಳಿದಿರುವ ಆ ಮಾರ್ಗವೊಂದೆ ಸೂಕ್ತ ಎಂದು ಸೂಚಿಸುವಾಗ ಸಾಚ್ಸ್ ತಪ್ಪೆನ್ನೆಸಗುತ್ತಿದ್ದಾರೆ. ಏಕೆಂದರೆ ಭಾರತದಲ್ಲಿಯ ಅಭಿವೃದ್ಧಿಯ ಯಶಸ್ವಿ ಪ್ರಯೋಗಗಳ ಉದಾಹರಣೆಯ ಪ್ರಕಾರ ಪ್ರತಿಯೊಂದು ದೇಶವು ತನ್ನ ಸಮಸ್ಯೆಗೆ ತನ್ನದೇ ಪರಿಹಾರಗಳನ್ನು ತಾನೇ ಕಂಡುಕೊಳ್ಳುವಂತೆ ಅದನ್ನು ಸಮರ್ಥವನ್ನಾಗಿ ಮಾಡುವುದರಲ್ಲಿಯೆ ನಿಜವಾದ ಪ್ರಗತಿಯ ಆಶಾಜ್ಯೋತಿಯಿದೆ.

ಸಾಭಾರ- ದಿ ಹಿಂದೂ.

ಅನು-ಸು.ಕೌ

ಜನಪದ ನಿಲಯದ ಅಂತರಂಗದಲ್ಲಿ........೧೮

–ಸು.ಕೌ.

"ಬಂಧನ ಬಂದೀತು ಇಲ್ಲಿಂದಲೋ, ಬಿಡುಗಡೆ ಇಂದೂನು ಇಲ್ಲಿಂದಲೋ.....ಬೇಂದ್ರೆ



ಈಗ್ಗೆ ನಲವತ್ತೈದು ವರ್ಷಗಳಿಂದ ಸರ್ವೋದಯ ವಿಚಾರದ ಆಧಾರದ ಮೇಲೆ ಸೇವಾ ಜೀವನವನ್ನು ಪೂರೈಸುತ್ತಲಿರುವ ಜನಪದ ಸೇವಾ ಟ್ರಸ್ಟಿನ ಸ್ಥಾಪನೆ ೧೯೬೦ ಆಗಸ್ಟ್ ೮ ರಂದು ಆಯಿತು. ಈ ಸಂಸ್ಥೆಯ ಜನನ ಅಥವಾ ಸ್ಥಾಪನೆ ಎಷ್ಟು ನಿಶಬ್ದವಾಗಿ, ಎಷ್ಟು ಶಾಂತ ಮತ್ತು ಸರಳವಾಗಿ ಆಯಿತೆಂದರೆ ಮೇಲುಕೋಟೆಯ ನಿವಾಸಿಗಳಿಗೆ ಗೊತ್ತಾಗಲೇ ಇಲ್ಲ. ಒಂದು ಮನೆಯಲ್ಲಿ ಹೆರಿಗೆಯಾದರೆ ನವಜಾತ ಶಿಶುವಿನ ಅಳುವಿನ ಧ್ವನಿಯಾದರೂ ಅಕ್ಕಪಕ್ಕದ ಮನೆಯವರಿಗೆ ಕೇಳಿ ಬಂದು ಈ ಪ್ರಪಂಚಕ್ಕೆ ಹೊಸ ಜೀವಿಯೊಂದರ ಸಂಭ್ರಮದ ಆಗಮನದ ಸುದ್ದಿ ಸುತ್ತಲಿನ ಜನ ಸಮೂಹಕ್ಕೆ ಗೊತ್ತಾಗುತ್ತದೆ.ಆದರೆ ಜನಪದ ಸೇವಾ ಟ್ರಸ್ಟಿನ ಜನನದ ಸ್ಥಾಪನೆ ಪಕ್ಕದ ಮನೆಯವರಿಗೂ ಗೊತ್ತಾಗಿಲ್ಲವೆಂದರೆ ಟ್ರಸ್ಟಿನ ಉಗಮ ಎಂಥ ಅಮೃತ ಘಳಿಗೆಯಲ್ಲಿ ಆಗಿತ್ತೆಂಬುದನ್ನು ನೀವು ಊಹಿಸಬಹುದು. ಇದನ್ನು ಅಮೃತ ಘಳಿಗೆಯೆಂದು ಏತಕ್ಕಾಗಿ ಕರೆಯುತ್ತೇನೆಂದರೆ ಈ ಟ್ರಸ್ಟ್ ತಾನು ಸ್ಥಾಪಿತಗೊಂಡ ನಂತರ ನಾಲ್ಕು ದಶಕಗಳಿಗಿಂತಲೂ ಹೆಚ್ಚು ಕಾಲ ಯಾವ ಅಡೆತಡೆ ಇಲ್ಲದೆ ವರ್ಷದಿಂದ ವರ್ಷಕ್ಕೆ ಜನಾನುರಾಗಿಯಾಗುತ್ತ, ಬೆಳೆಯುತ್ತ ಹೋಯಿತು. ಇನ್ನೂ ಬೆಳೆಯುತ್ತಲೇ ಹೋಗುತ್ತಿದೆ. ಇಲ್ಲಿ ಇನ್ನೊಂದು ವಿಶೇಷ ಸಂಗತಿಯೆಂದರೆ ಈಗಾಗಲೆ ನಾನೊಂದು ಸಲ ಪ್ರಸ್ತಾಪಿಸಿರುವಂತೆ ಟ್ರಸ್ಟ್ ಸ್ಥಾಪನೆಯಾದ ದಿನ ಒಂದು ರೂಪಾಯಿ ಸಹ ಬ್ಯಾಂಕಿನಲ್ಲಿ ಇರಲಿಲ್ಲ. ಅಲ್ಲದೆ ಟ್ರಸ್ಟ್ ಸ್ಥಾಪನೆಗಾಗಿ ಸೇರಿದ್ದ ೫-೬ ಮಿತ್ರರಲ್ಲಿ ಯಾರೂ ಹಣವಂತರಾಗಿರಲಿಲ್ಲ. ಅವರೆಲ್ಲರೂ ನನ್ನ ವಿಚಾರ, ಸ್ವಭಾವ, ಗುಣ, ಗುರಿ ಇತ್ಯಾದಿಗಳನ್ನು ಹತ್ತಿರದಿಂದ ಬಲ್ಲವರಾಗಿ ನಾನು ಮೇಲುಕೋಟೆ ಮತ್ತು ಸುತ್ತಲಿನ ಗ್ರಾಮಗಳಲ್ಲಿ ಮಾಡಲು ಹೊರಟಿರುವ ಸರ್ವೋದಯ ವಿಚಾರಾಧಾರಿತ ರಚನಾತ್ಮಕ ಕಾರ್ಯಕ್ಕೆ ನೈತಿಕ ಬೆಂಬಲ ಕೊಡಲು ಬಂದಂಥವರಾಗಿದ್ದರು. ಅವರಲ್ಲಿ ಪ್ರಮುಖರಾದವರೆಂದರೆ ನಾನು ಮತ್ತು ನಾನು ಮದುವೆಯಾಗಲಿದ್ದ ಗಿರಿಜಾ! ಇನ್ನು ಉಳಿದವರಲ್ಲಿ ಬಿ.ಆರ್.ಪ್ರಾಣೇಶ್‌ರಾವ್, ಎಸ್.ಪಟ್ಟಾಭಿರಾಮನ್, ಟಿ.ಎಲ್.ಭೈರಶೆಟ್ಟಿ, ಎನ್.ನಾಗರಾಜ್, ಎಸ್.ನಾರಾಯಣಸ್ವಾಮಿ. ಗಿರಿಜಾ ಮತ್ತು ನಾನು ಇಷ್ಟರಲ್ಲಿಯೇ ಮದುವೆಯಾಗಲಿದ್ದೇವೆಂಬುದರ ಸುಳಿವು ತಿಳಿದ ಪ್ರಾಣೇಶ್‌ರಾವ್ ನನ್ನೊಂದಿಗೆ ಗಿರಿಜಾ ಕೂಡ ಟ್ರಸ್ಟಿನ ಧರ್ಮದರ್ಶಿಗಳಲ್ಲೊಬ್ಬರಾಗಿರಬೇಕೆಂದು ಒತ್ತಾಯಿಸಿದ್ದರು. ಗಿರಿಜಾ

ಮತ್ತು ನಾನು ದಂಪತಿಗಳಾಗಿ ಸಮಾಜ ಸೇವೆಗೆ ನಮ್ಮನ್ನು ಅರ್ಪಿಸಿಕೊಂಡು ಕಾರ್ಯಕರ್ತರಾಗಿ ಕೆಲಸ ಮಾಡಲು ಉದ್ದೇಶಿಸಿದ್ದರಿಂದ ಟ್ರಸ್ಟಿನ ಸದಸ್ಯರಾಗಿ ನಾವಿಬ್ಬರೂ ಇರಬೇಕೆಂದು ಪ್ರಾಣೇಶ್‌ರಾವ್ ಬಯಸಿದ್ದರು. ನನ್ನ ಅಣ್ಣನೋಪಾದಿಯಾಗಿದ್ದು ಮಾರ್ಗದರ್ಶಕರೂ, ಹಿತೈಷಿಗಳೂ ಆಗಿದ್ದುದರ ಕಾರಣದಿಂದ ನಾನು ಟ್ರಸ್ಟ್ ಸ್ಥಾಪಿಸಬೇಕೆಂದು ಯೋಚಿಸಿದ್ದಾಗಿನಿಂದಲೂ ಪ್ರಾಣೇಶ್‌ರಾವ್‌ರನ್ನು ಟ್ರಸ್ಟಿನ ಸದಸ್ಯರನ್ನಾಗಿ ಹೊಂದಲು ಅಪೇಕ್ಷೆಪಟ್ಟಿದ್ದೆ. ಈ ವಿಷಯವನ್ನು ಅವರಿಗೆ ತಿಳಿಸಿದಾಗ ಅವರು ಸಂತೋಷದಿಂದ ಒಪ್ಪಿಕೊಂಡು ಟ್ರಸ್ಟಿನ ಸ್ಥಾಪನೆಯ ನಿಗದಿತ ದಿನ ಮುದಿತ ಮನಸ್ಸಿನೊಂದಿಗೆ ತಮ್ಮ ಮೆಲು ಆದರೆ ದೃಢವಾದ ಹೆಜ್ಜೆಗಳೊಂದಿಗೆ ನಾನು ಮೇಲುಕೋಟೆಯಲ್ಲಿ ವಾಸವಾಗಿದ್ದ ಕಲ್ಯಾಣಿ ಬೀದಿಯಲ್ಲಿಯ ಪಿ.ಅರ್.ಪೆನೆಗೊಂಡೆ ದೇಶಿಕಾಚಾರ್ಯರ ಮನೆಗೆ ಬಂದರು. ತಮ್ಮ ಜೊತೆಗೆ ಯುವ ಸ್ನೇಹಿತರಾಗಿದ್ದ ಪಟ್ಟಾಭಿರಾಮನ್‌ರವರನ್ನು ಕರೆದುಕೊಂಡು ಬಂದಿದ್ದರು. ಮೈಸೂರಿನಲ್ಲಿ ಗಾಂಧೀ ಗ್ರಂಥ ಮಾಲೆಯಲ್ಲಿ ಪ್ರಾಣೇಶ್‌ರಾವ್ ಉಪಸಂಪಾದಕರಾಗಿ ಕೆಲಸ ಮಾಡುತ್ತಿದ್ದಾಗ ಆ ಗ್ರಂಥಮಾಲೆಯ ಕಛೇರಿಯಲ್ಲಿ ಪಟ್ಟಭಿರಾಮನ್ ಲೆಕ್ಕಿಗ ಹಾಗೂ ಟೈಪಿಸ್ಟ್ ಆಗಿ ಕೆಲಸ ಮಾಡುತ್ತಿದ್ದುದರಿಂದ ಅವರೀರ್ವರ ಪರಿಚಯವಾಗಿತ್ತು. ಹಾಗಾಗಿ ಪ್ರಾಣೇಶ್‌ರಾವ್ ಮೇಲುಕೋಟೆಗೆ ಬರುವಾಗ ಪಟ್ಟಾಭಿರಾಮನ್‌ರವರನ್ನು ಕರೆದುಕೊಂಡು ಬಂದಿದ್ದರು. ಪಟ್ಟಾಭಿರಾಮನ್‌ರವರ ವಯಸ್ಸೂ, ನನ್ನ ವಯಸ್ಸಿಗೂ ಸರಿಸುಮಾರಾಗಿ ಒಂದೇ ಆಗಿದ್ದಿತು. ಪ್ರಾಣೇಶ್‌ರಾವ್ ಹೊಸ ಹುಡುಗರನ್ನು, ಯುವಕರನ್ನು ಕಂಡರೆ ಇಷ್ಟಪಡುವಂಥವರೂ, ಮತ್ತು ಅವರ ಒಳ್ಳೆಯ ಕೆಲಸಗಳಿಗೆ ಪ್ರೋತ್ಸಾಹಕೊಡುವಂಥವರೂ ಆಗಿದ್ದರು. ಅವರು ವಿದ್ಯಾರ್ಥಿದೆಸೆಯಿಂದಲೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು; ಗಾಂಧೀ ಗ್ರಂಥ ಮಾಲೆಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಬಹಳಷ್ಟು ಗಾಂಧೀ ಸಾಹಿತ್ಯವನ್ನು ಓದಿದವರಾಗಿದ್ದರು. ಸದಾ ಖಾದಿ ಬಟ್ಟೆಯನ್ನೇ ತೊಡುತ್ತಿದ್ದರು. ಟ್ರಸ್ಟ್ ಸ್ಥಾಪನಾ ಸಭೆಗೆ ಹೀಗೆ ನಾವು ನಾಲ್ಕು ಜನರಾದೆವು. ನಾನು ಮೇಲುಕೋಟೆಗೆ ಬಂದಾಗಿನಿಂದಲೂ ನನ್ನ ಬಗ್ಗೆ ಪ್ರೀತಿ ಇಟ್ಟು ಕೊಂಡಿದ್ದ ಜವಳಿ ವ್ಯಾಪಾರಿಯಾಗಿದ್ದ ಟಿ.ಎಲ್.ಭೈರಶೆಟ್ಟರನ್ನೂ ಸಹ ನಾನು ಅಂದಿನ ಸಭೆಗೆ ಆಹ್ವಾನಿಸಿದ್ದೆ. ಆ ದಿನ ಹಾಜರಿದ್ದ ನಾರಾಯಣಸ್ವಾಮಿ ಹೊನಕೆರೆ ಖಾದಿ ಕೇಂದ್ರದಲ್ಲಿ ವ್ಯವಸ್ಥಾಪಕರಾಗಿದ್ದರು ಮತ್ತು ಮೇಲುಕೋಟೆಯಲ್ಲಿ ಖಾದಿನೇಯ್ಗೆ ಮಾಡಿಸಲು ಸಹಾಯ ಮಾಡಿದ್ದರು, ತುಂಬಾ ಸಾಧು ಸ್ವಭಾವದವರಾಗಿದ್ದರು. ಆದ್ದರಿಂದ ನಾನು ಟ್ರಸ್ಟಿನ ಸ್ಥಾಪನಾ ದಿನದ ಸಭೆಗೆ ನಾರಾಯಣಸ್ವಾಮಿಯವರನ್ನು ಆಹ್ವಾನಿಸಿದ್ದೆ. ಅಂದಿನ ಸಭೆಗೆ ಬಂದಿದ್ದ ಇನ್ನೋರ್ವ ಸ್ನೇಹಿತ ಬಿ.ಕೆ.ಕೆಂಚೆಗೌಡ, ಇವರು ಮೇಲುಕೋಟೆ ಪಕ್ಕದ ಬೆಳ್ಳಾಳೆ ಗ್ರಾಮದ ರೈತನ ಮಗ. ಮೈಸೂರಿನಲ್ಲಿ ಅವರ ಅಣ್ಣನವರೇ ನಡೆಸುತ್ತಿದ್ದ ಹಾಸ್ಟೆಲಿನಲ್ಲಿ ಇದ್ದು ಬಿ.ಎ.ಪಾಸು ಮಾಡಿದ್ದರು. ಅವರೂ ಸಹ ನನ್ನ ವಯಸ್ಸಿನವರೇ ಆಗಿದ್ದರು. ಆದರೆ ಅವರು ಕಾಂಗ್ರೆಸ್ ಪಕ್ಷದ ಕಾರ್ತಕರ್ತರಾಗಿ ಓಡಾಡಿಕೊಂಡಿದ್ದರು. ಒಂದು ಸಲ ಅವರು ಮೇಲುಕೋಟೆಗೆ ಬಂದಿದ್ದಾಗ ಆಕಸ್ಮಿಕವಾಗಿ ನನ್ನ ಅವರ ಭೇಟಿ ಆಯಿತು. ನನ್ನಷ್ಟೇ ವಯಸ್ಸಿನ ಯುವಕನೊಬ್ಬ ಸಾರ್ವಜನಿಕ ಕಾರ್ಯದಲ್ಲಿ ಆಸಕ್ತಿ

ಹೊಂದಿರುವುದನ್ನು ತಿಳಿದು ಸಂತೋಷವಾಯಿತು. ಅಲ್ಲದೆ ಅವರು ಪಕ್ಕದ ಹಳ್ಳಿಯವರೇ ಆಗಿದ್ದುದರಿಂದ ಅವರನ್ನು ನಾನು ಸ್ಥಳೀಯ ಯುವಕರೆಂದೇ ಭಾವಿಸಿದ್ದೆ. ಅಲ್ಲದೆ ಅವರು ಕಾಂಗ್ರೆಸ್ಸಿಗರಾಗಿದ್ದರಿಂದ ಖಾದಿ ಉಡುಪನ್ನೇ ಧರಿಸುತ್ತಿದ್ದರು. ನಾನು ತಿಳಿದಂತೆ ಅವರು ನೇರ ನಡೆನುಡಿಯವರೂ ಮತ್ತು ಸ್ವಚ್ಛವಾದ ಚರ್ಯೆಯುಳ್ಳವರೂ ಆಗಿದ್ದರು. ಆದ್ದರಿಂದ ಸಹಜವಾಗಿಯೇ ಕೆಂಚೆಗೌಡರನ್ನು ಟ್ರಸ್ಟಿನ ಸದಸ್ಯರನ್ನಾಗಿ ಮಾಡಿಕೊಳ್ಳಬೇಕೆಂಬ ಯೋಚನೆ ನನ್ನ ಮನಸ್ಸಿನಲ್ಲಿ ಮೂಡಿತು. ಈ ವಿಚಾರವನ್ನು ಅವರಿಗೆ ತಿಳಿಸಿದಾಗ ಅವರು ಸಂತೋಷದಿಂದ ಒಪ್ಪಿ ಟ್ರಸ್ಟಿನ ಸ್ಥಾಪನಾ ದಿನದಿಂದ ಬಂದರು.

ಇಲ್ಲಿ ನನ್ನ ಮತ್ತು ಗಿರಿಜಾರವರ ಸಂಬಂಧದ ಬಗ್ಗೆ ಒಂದೆರಡು ವಿಚಾರ ಹೇಳಬೇಕು. ನಾನು ಮೇಲುಕೋಟೆಗೆ ಬಂದಾದ ಮೇಲೆ ಭಕ್ತಮಂಡಳಿ ಎಂಬ ಸಂಸ್ಥೆಗೆ ಸೇರಿದ ಮನೆಯ ಒಂದು ಕೋಣೆಯಲ್ಲಿ ವಾಸವಾಗಿದ್ದೆನಷ್ಟೆ ಭಕ್ತಮಂಡಳಿಯ ಮನೆಯ ಪಕ್ಕ ಇನ್ನೊಂದು ಮನೆಯಿತ್ತು. ಆ ಮನೆಯಲ್ಲಿ ಮೇಲುಕೋಟೆ ಶ್ರೀ.ನಾರಾಯಣಸ್ವಾಮಿ ದೇವಸ್ಥಾನದ ಪೇಷ್ಕಾರ್‌ರಾಗಿದ್ದ ಶ್ರೀ ನರಸಿಂಹಮೂರ್ತಿಯವರ ಸಂಸಾರ ಇತ್ತು. ಆ ಸಂಸಾರದಲ್ಲಿ ನರಸಿಂಹಮೂರ್ತಿಯವರ ಪತ್ನಿ ನಾಗಮ್ಮ, ಒಂದು ಗಂಡು ಮಗು ಮತ್ತು ಒಂದು ಹೆಣ್ಣು ಮಗು ಹೀಗೆ ನಾಲ್ಕು ಜನ ಮಾತ್ರ ಇದ್ದರು. ನರಸಿಂಹಮೂರ್ತಿಯವರು ಮೇಲುಕೋಟೆಗೆ ಬರುವ ಮುನ್ನ ಕೃಷ್ಣರಾಜಪೇಟೆ ತಾಲ್ಲೋಕು ಆಫೀಸಿನಲ್ಲಿ ರೆವೆನ್ಯೂ ಇನ್‌ಸ್ಪೆಕ್ಟರ್ ಆಗಿದ್ದರು. ಅವರ ಹೆಂಡತಿ ನಾಗಮ್ಮನವರು ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ್ದರು. ಕೃಷ್ಣರಾಜಪೇಟೆ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ನಂಜುಂಡಯ್ಯನವರ ಪತ್ನಿ ಜಯಲಕ್ಷ್ಮಿಯವರ ಜೊತೆಗೂಡಿ ಮಹಿಳಾ ಸಮಾಜ ಸ್ಥಾಪಿಸಿದ್ದರು. ಮಹಿಳಾ ಸಮಾಜದ ಆಶ್ರಯದಲ್ಲಿ ವಯಸ್ಕ ಮಹಿಳೆಯರಿಗೆ ಸಂಕ್ಷಿಪ್ತ ಎಸ್.ಎಸ್.ಎಲ್.ಸಿ. ಕೋರ್ಸ್ ಮತ್ತು ಶಿಶುವಿಹಾರ ಇತ್ಯಾದಿ ಕಾರ್ಯಕ್ರಮ ನಡೆಸುತ್ತಿದ್ದರು. ಎನ್,ಜಯಲಕ್ಷ್ಮಿಯವರು ಮುಂದೆ ನಾಟಕ ಕರ್ತೆಯಾಗಿ, ಸಾಹಿತಿಯಾಗಿ ಪ್ರಸಿದ್ಧಿ ಪಡೆದರು. ನರಸಿಂಹಮೂರ್ತಿಯವರ ಹೆಂಡತಿ ಎಲ್ಲರೊಂದಿಗೆ ಸ್ನೇಹಪರವಾಗಿರುತ್ತಿದ್ದರು. ಪಕ್ಕದ ಭಕ್ತ ಮಂಡಳಿಯ ಮನೆಯಲ್ಲಿ ವಾಸವಾಗಿದ್ದ ನನ್ನ ಪರಿಚಯವನ್ನೂ ಮಾಡಿಕೊಂಡಿದ್ದರು ಮತ್ತು ಆಗಾಗ್ಗೆ ನನ್ನನ್ನು ತಮ್ಮ ಮನೆಗೆ ಕರೆದು ಕಾಫಿ–ತಿಂಡಿ ಕೊಡುತ್ತಿದ್ದರು. ನಾನು ಮೇಲುಕೋಟೆಯಲ್ಲಿ ಸಾರ್ವಜನಿಕ ಕೆಲಸ ಮಾಡಲು ಇಷ್ಟಪಟ್ಟಿರುವುದನ್ನು ತಿಳಿದು ಅವರು ಸಂತೋಷಗೊಂಡಿದ್ದರು. ಮೇಲುಕೋಟೆಯಲ್ಲಿಯೂ ಸಹ ಮಹಿಳಾ ಸಮಾಜ, ಶಿಶುವಿಹಾರ, ಹೊಲಿಗೆತರಗತಿ ಇತ್ಯಾದಿ ಪ್ರಾರಂಭಿಸುವಂತೆ ನನಗೆ ಪ್ರೋತ್ಸಾಹಿಸುತ್ತಿದ್ದರು.

–ಮುಂದುವರಿಯುವುದು.

***

ವಾಚಕ ಮಿತ್ರರಲ್ಲಿ ವಿನಂತಿ.

ಜನಪದ ವಿಚಾರ ಪ್ರಸ್ತುತ ವಿಷಯುಗಳಿಗೆ ಸಂಬಂಧಿಸಿದಂತೆ ಲೇಖನಗಳನ್ನು ಆಹ್ವಾನಿಸುತ್ತದೆ. ಆಸಕ್ತರು ಪತ್ರಿಕೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

ತಾವು ದಯಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ 100/- ರೂ. ಮನಿಆರ್ಡರ್ ಮೂಲಕ ಕಳುಹಿಸಿ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

-ಪ್ರಕಾಶಕರು



ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(-ಸಂಪಾದಕರು)

KA-SKMND-470-2003-05
Regd. no. KAR/KAN/2000/3820

ತೆರೆದ-ಅಂಚೆ

TO,

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ® . Melkote. Dist- mandya – 571431
Phone : 08236 – 298754 e-mail : janapada@yahoo.com